ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಬಾಂಗ್ಲಾ ಮಾಜಿ ಪ್ರಧಾನಿ ಖಲೀದಾ ಜಿಯಾ ಸ್ಥಿತಿ ಗಂಭೀರ, ಬ್ರಿಟನ್ ವೈದ್ಯರಿಂದ ಚಿಕಿತ್ಸೆ...



03 ಡಿಸೆಂಬರ್ 2025 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 261 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ವೇಳೆ ಬರೋವರೆಗೂ ತಾಳ್ಮೆಯಿಂದ ಕೆಲಸ ಮಾಡುತ್ತಿರಬೇಕು ! » 2



ದೇಶದಲ್ಲಿ ಪ್ರತಿ 811 ಜನರಿಗೆ ಒಬ್ಬ ವೈದ್ಯ » 3



ಎಸ್ಐಆರ್ ಚರ್ಚೆಗೆ ಕೇಂದ್ರ ಸರ್ಕಾರ ಒಪ್ಪಿಗೆ » 4

# ಹೈಕಮಾಂಡ್ ಹೇಳಿದರೆ ಡಿ.ಕೆ.ಶಿ. ಮುಖ್ಯಮಂತ್ರಿ

## ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯೆ: ಮತ್ತೊಮ್ಮೆ ಉಪಾಹಾರ ಕೂಟ

• ಪ್ರಜೋದಯ ವರದಿ

**ಬೆಂಗಳೂರು:** ನಾಯಕತ್ವ ಬದಲಾವಣೆ ವಿವಾದಕ್ಕೆ ಅಂತಿಮ ತೆರೆ ಎಳೆಯುವ ಪ್ರಯತ್ನದ ಭಾಗವಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಬ್ಬರೂ ನಾಯಕರು ಮಂಗಳವಾರ ಮಾಧ್ಯಮಗಳೆದುರು ಮತ್ತೊಮ್ಮೆ ಒಗ್ಗಟ್ಟು ಪ್ರದರ್ಶನ ಮಾಡಿದ್ದಾರೆ.

ಸದಾಶಿವನಗರದಲ್ಲಿರುವ ಡಿ.ಕೆ.ಶಿವಕುಮಾರ್ ಮನೆಗೆ ಮಂಗಳವಾರ ಬೆಳಿಗ್ಗೆ ಆಗಮಿಸಿದ ಸಿದ್ದರಾಮಯ್ಯ ಅವರು ಉಪಾಹಾರವನ್ನು ಸವಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್, ನಾಯಕತ್ವ ಬದಲಾವಣೆ ವಿಚಾರವಾಗಿ ಹೈಕಮಾಂಡ್ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧ ಎಂದು ಪುನರುಚ್ಚರಿಸಿದರು. ಇದೇ ವೇಳೆ ಡಿ.ಕೆ.ಶಿವಕುಮಾರ್ ಯಾವಾಗ ಮುಖ್ಯಮಂತಿಯಾಗುತ್ತಾರೆಂಬ ಪತ್ರಕರ್ತರ ಪ್ರಶ್ನೆಗೆ, ಹೈಕಮಾಂಡ್ ಹೇಳಿದಾಗ ಎಂದು ಸಿದ್ದರಾಮಯ್ಯ ಚುಟುಕಾಗಿ ಉತ್ತರಿಸಿದರು. ಸಿದ್ದರಾಮಯ್ಯ ಅವರ ಉತ್ತರ ಕೇಳಿ ಡಿ.ಕೆ. ಶಿವಕುಮಾರ್ ಮೌನವಾಗಿ ಸಮ್ಮತಿ ಸೂಚಿಸಿದಂತೆ ಕಂಡುಬಂದರು.

ಹೈ ಕಮಾಂಡ್ ಸೂಚನೆಯಂತೆ ನಡೆದುಕೊಳ್ಳುವುದಾಗಿ ಚರ್ಚಿಸಲಾಗಿದೆ. ನಮ್ಮಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಒಗ್ಗಟ್ಟಿನಿಂದ ಇದ್ದೇವೆ. ನಾನು ಹಾಗು ಉಪಮುಖ್ಯಮಂತ್ರಿ ಸಹೋದರರಿದ್ದಂತೆ, ಒಂದೇ ಪಕ್ಷದಲ್ಲಿದ್ದು, ಒಂದೇ ಸಿದ್ಧಾಂತ ನಂಬಿಕೊಂಡಿದ್ದೇವೆ. 2028 ರ ಚುನಾವಣೆಯಲ್ಲಿಯೂ ಒಟ್ಟಿಗೆ ಕೆಲಸ ಮಾಡಿ ಪಕ್ಷವನ್ನು ಅಧಿಕಾರಕ್ಕೆ ತರಲಾಗುವುದು. ಸಮಯ ಸಿಕ್ಕರೆ ಹೈ ಕಮಾಂಡ್ ಭೇಟಿ ಮಾಡಲಾಗುವುದೆಂದು ತಿಳಿಸಿದರು.

ಬೆಳಗಾವಿ ಅಧಿವೇಶದಲ್ಲಿ ಸರ್ಕಾರ ಸಮರ್ಥವಾಗಿ ವಿಪಕ್ಷಗಳನ್ನು ಎದುರಿಸಲಿದೆ. ರಾಜ್ಯದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪಕ್ಷದ ವಿಚಾರಗಳನ್ನು ಈ ಭೇಟಿಯಲ್ಲಿ ಚರ್ಚಿಸಲಾಗಿದೆ. ಡಿ.8 ರಿಂದ ಬೆಳಗಾವಿ ಅಧಿವೇಶನ ಪ್ರಾರಂಭವಾಗಲಿದ್ದು, ವಿಪಕ್ಷಗಳನ್ನು ಎದುರಿಸಲು ಸರ್ಕಾರದ ರಣನೀತಿಗಳ ಬಗ್ಗೆ ಚರ್ಚಿಸಲಾಗಿದೆ. ವಿಪಕ್ಷಗಳು ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲಿದ್ದಾರೆಂಬ ಮಾಹಿತಿ ಪತ್ರಿಕೆಗಳಿಂದ ತಿಳಿದು ಬಂದಿದೆ ಎಂದು ಸಿದ್ದರಾಮಯ್ಯ ಅವರು ಹೇಳಿದರು.

**ಯಾವುದೇ ಭಿನ್ನಾಭಿಪ್ರಾಯವಿಲ್ಲ: ಡಿಕೆಶಿ**

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್



ಅವರು ಮಾತನಾಡಿ, ನಾವು ಕಾಂಗ್ರೆಸ್‌ನಲ್ಲಿ ಒಂದೇ ಧ್ವನಿಯಾಗಿದ್ದೇವೆ. ಪಕ್ಷದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ನನ್ನ ಮತ್ತು ಸಿದ್ದರಾಮಯ್ಯ ನಡುವೆ ವ್ಯತ್ಯಾಸಗಳಿವೆ ಎಂಬುದು ಕೇವಲ ಮಾಧ್ಯಮಗಳ ಸೃಷ್ಟಿ ಎಂದು ಸ್ಪಷ್ಟಪಡಿಸಿದರು.

ಈ ವೇಳೆ ರಾಜಕೀಯವಾಗಿಯೂ ಚರ್ಚೆ ಮಾಡಿದ್ದೇವೆ. ಪದವೀಧರ ಹಾಗು ಶಿಕ್ಷಕರ ನಾಲ್ಕು ಕ್ಷೇತ್ರಗಳ ವಿಧಾನ ಪರಿಷತ್ ಚುನಾವಣೆಗೆ ಪಕ್ಷದ

» ನಾಲ್ಕನೇ ಪುಟದಲ್ಲಿ

### ರಾಜಕೀಯ ನಮ್ಮಪ್ಪನ ಆಸ್ತಿ ಅಲ್ಲ...ಏನ್ ಆಗುತ್ತೋ ಆಗಲಿ...

ರಾಜಕೀಯ ಶಾಶ್ವತ ಅಲ್ಲ, ನಾನು ಯಾವುದಕ್ಕೂ ತಲೆಕೆಡಿಸಿಕೊಳ್ಳುವುದಿಲ್ಲ. ರಾಜಕೀಯ ನಮ್ಮಪ್ಪನ ಆಸ್ತಿಯಾ, ಏನ್ ಆಗುತ್ತೋ ಆಗಲಿ ಎಂದು ಸಿದ್ದರಾಮಯ್ಯ ಅವರು ಅಚ್ಚರಿ ಮಾತುಗಳನ್ನಾಡಿದ್ದಾರೆ.

ವಿಧಾನಸೌಧದಲ್ಲಿ ಸಭೆ ಮುಗಿಸಿ ಹೊರಬರುತ್ತಿದ್ದ ಸಿದ್ದರಾಮಯ್ಯ ಅವರಿಗೆ ಅಡ್ಡ ಬಂದು ನಿಂತ ಬೇಳೂರು ಗೋಪಾಲಕೃಷ್ಣ, ಮೊದಲು ಹಾಸ್ಯದ ಲಹರಿಯಲ್ಲಿ ನಾಟಿ ಕೋಳಿ ಸಾಂಬಾರ್ ಹೇಗಿತ್ತು ಸಾರ್ ಎಂದು ಪ್ರಶ್ನಿಸಿದರು. ಸಿದ್ದರಾಮಯ್ಯ ಅವರ ಉತ್ತರ ಸಂಪೂರ್ಣ ಗಂಭೀರವಾಗಿತ್ತು. ರಾಜಕೀಯ ಶಾಶ್ವತ ಅಲ್ಲ ಗೋಪಾಲಕೃಷ್ಣ, ನಾನು ಯಾವುದಕ್ಕೂ ತಲೆಕೆಡಿಸಿಕೊಳ್ಳುವುದಿಲ್ಲವೆಂಬ ಸಂಭಾಷಣೆ ಚರ್ಚೆಗೆ ಗ್ರಾಸವಾಗಿದೆ.

# ಡಿ.6ರ ಸಮಾವೇಶಕ್ಕೆ ಸಿಎಂ-ಡಿಸಿಎಂಗೆ ಆಹ್ವಾನ



• ಪ್ರಜೋದಯ ವರದಿ

**ಹಾಸನ:** ನಗರದ ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ಮೈದಾನದಲ್ಲಿ ಡಿ.6 ರಂದು ನಡೆಯಲಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ಹಾಗು ಸರ್ಕಾರದ ಸೇವೆಗಳ ಸಮರ್ಪಣಾ ಸಮಾವೇಶಕ್ಕೆ ಜಿಲ್ಲಾಡಳಿತದಿಂದ ಮಂಗಳವಾರ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗೆ ಆಹ್ವಾನ ನೀಡಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ.ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರನ್ನು



ಪ್ರತ್ಯೇಕ ವಾಗಿ ಭೇಟಿಯಾದ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಗೃಹ ಮಂಡಳಿ ಅಧ್ಯಕ್ಷ ಕೆ.ಎಂ. ಶಿವಲಿಂಗೇಗೌಡ, ಜಿಲ್ಲಾಧಿಕಾರಿ ಲತಾಕುಮಾರಿ ಅವರು ಡಿ.6 ರಂದು ನಡೆಯುವ ಸಮಾವೇಶಕ್ಕೆ ಆಗಮಿಸುವಂತೆ ಆಹ್ವಾನ ಪತ್ರಿಕೆ ನೀಡಿ ಜಿಲ್ಲಾಡಳಿತದಿಂದ ಆಹ್ವಾನಿಸಲಾಯಿತು. ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ, ಉಪ ವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್ ಹಾಜರಿದ್ದರು.

# ಜಿಲ್ಲಾದ್ಯಂತ ಭಕ್ತಿ ಪೂರ್ವಕ ಹನುಮ ಜಯಂತಿ ಆಚರಣೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾದ್ಯಂತ ಹನುಮ ಜಯಂತಿಯನ್ನು ಭಕ್ತಿ ಪೂರ್ವಕವಾಗಿ ಆಚರಿಸಲಾಯಿತು. ಆಂಜನೇಯ ಸ್ವಾಮಿ ದೇಗುಲ, ಶ್ರೀರಾಮ ಮಂದಿರಗಳಲ್ಲಿ ವಿಶೇಷ ಪೂಜಾ ಕೈಂಕರ್ಯ, ಹೋಮ-ಹವನ, ಮೆರವಣಿಗೆ ನಡೆಸಲಾಯಿತು.

ನಗರದ ನೀರುವಾಗಿಲು ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿ ಪ್ರಯುಕ್ತ ವಿಶೇಷ ಅಲಂಕಾರ ಮಾಡಿ, ಪೂಜಾ ಕಾರ್ಯ ನೆರವೇರಿಸಲಾಯಿತು. ಶಾಸಕರಾದ ಹೆಚ್.ಪಿ.ಸ್ವರೂಪ್, ಸಿಮೆಂಟ್ ಮಂಜು, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ವಿಧಾನ ಪರಿಷತ್ ಸದಸ್ಯ ಅರುಣ್ ಶಂಕರ್ ಮೂರ್ತಿ ಪ್ರಮುಖರು ಪೂಜೆ ಸಲ್ಲಿಸಿದರು.

ನಗರದ ಹಾಲುವಾಗಿಲು ರಸ್ತೆ



ತಣ್ಣೀರುಹಳ್ಳದಲ್ಲಿರುವ ಆಂಜನೇಯ ಸ್ವಾಮಿ ದೇಗುಲದಲ್ಲೂ ವಿಶೇಷ ಪೂಜೆ, ಅನ್ನಸಂತರ್ಪಣೆ ಮೆರವಣಿಗೆ ನಡೆಯಿತು. ಶಾಸಕ ಹೆಚ್.ಪಿ. ಸ್ವರೂಪ್ ಅವರು ಭಾವಗವಹಿಸಿ, ಪೂಜೆ ಸಲ್ಲಿಸಿ, ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಿದರು. ರಾಯಪುರ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಹನುಮ ಜಯಂತಿಯನ್ನು ವಿಶೇಷವಾಗಿ ಆಚರಿಸಲಾಯಿತು.

ನಗರದ ರೈಲ್ವೆ ನಿಲ್ದಾಣ ಎದುರಿರುವ ಶ್ರೀ ಆಂಜನೇಯ ದೇವಸ್ಥಾನದಲ್ಲಿ ಬೆಳಿಗ್ಗೆಯಿಂದ ಸಂಜೆವರೆಗೂ ವಿವಿಧ ಸೇವಾ ಕಾರ್ಯಕ್ರಮ ಹಾಗು ಮಧ್ಯಾಹ್ನ ಅನ್ನಸಂತರ್ಪಣೆ ಯಶಸ್ವಿಯಾಗಿ ನೆರವೇರಿಸಲಾಯಿತು.

» ನಾಲ್ಕನೇ ಪುಟದಲ್ಲಿ

# ಕಾಂಗ್ರೆಸ್ ರೈತ ವಿರೋಧಿ ನೀತಿ ವಿರುದ್ಧ ಬಿಜೆಪಿ ಪ್ರತಿಭಟನೆ

## ಎತ್ತಿನ ಗಾಡಿಯಲ್ಲಿ ಹಾಲಿನ ಕ್ಯಾನ್ ಹಿಡಿದು ಮೆರವಣಿಗೆ : ಸರ್ಕಾರದ ವಿರುದ್ಧ ಆಕ್ರೋಶ

• ಪ್ರಜೋದಯ ವರದಿ

**ಹಾಸನ:** ರೈತ ವಿರೋಧಿ ನೀತಿ ಅನುಸರಿಸುತ್ತಿರುವ ರಾಜ್ಯ ಸರ್ಕಾರ ಕೂಡಲೇ ಸಂಪೂರ್ಣ ಬೆಳೆ ಹಾನಿ ನೀಡಬೇಕು. ಮೆಕ್ಕೆಜೋಳ ಖರೀದಿ ಕೇಂದ್ರ ಆರಂಭಿಸಿ ಬೆಂಬಲ ನೀಡಬೇಕೆಂದು ಒತ್ತಾಯಿಸಿ ಶಾಸಕರಾದ ಸಿಮೆಂಟ್ ಮಂಜು, ಹೆಚ್.ಕೆ. ಸುರೇಶ್ ಅವರ ನೇತೃತ್ವದಲ್ಲಿ ಬಿಜೆಪಿ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಿಂದ ಎತ್ತಿನ ಗಾಡಿ, ಹಾಲಿನ ಕ್ಯಾನ್ ಹಿಡಿದು ಮೆರವಣಿಗೆ ಹೊರಟ ಪ್ರತಿಭಟನಾಕಾರರು, ಜಿಲ್ಲಾ ಪಂಚಾಯಿತಿ ಕಚೇರಿ ಎದುರು ಬಿ.ಎಂ.ರಸ್ತೆಯಲ್ಲಿ



ವಾಹನ ಸಂಚಾರ ತಡೆದು, ಮಾನವ ಸರಪಳಿ ನಿರ್ಮಿಸಿ, ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಿದರು.

ರಾಜ್ಯದಲ್ಲಿ ಶೇ.58 ರಷ್ಟು ಜನ ಸಂಖ್ಯೆ ರೈತಾಪಿ ವರ್ಗವಾಗಿದ್ದು, ಶೇ.85 ರೈತರು ಸಣ್ಣ ಹಿಡುವಳಿದಾರರಿದ್ದಾರೆ. ಎರಡೂವರೆ ವರ್ಷಗಳಿಂದ ಕಾಂಗ್ರೆಸ್ ಸರ್ಕಾರ, ಬಿಜೆಪಿ ಸರ್ಕಾರ ಜಾರಿಗೊಳಿಸಿದ್ದ ರೈತರ ಪರ ಅನೇಕ ಯೋಜನೆ ಸ್ಥಗಿತಗೊಳಿಸಿ, ರೈತರ ಮೇಲೆ ರಾಜಕೀಯ ಹಗೆತನ ಸಾಧಿಸುತ್ತಿದೆ. ಸರ್ಕಾರದ ಅಂಕಿ ಅಂಶ

» ನಾಲ್ಕನೇ ಪುಟದಲ್ಲಿ

> ಜಿಲ್ಲೆಯಲ್ಲಿ ಮೆಕ್ಕೆಜೋಳಕ್ಕೆ ಬಿಳಿಸುಳಿ ರೋಗ ಬಂದು ಅಪಾರ ಪ್ರಮಾಣದ ಬೆಳೆ ಹಾಳಾಗಿದೆ. ಉಳಿದ ಫಸಲು ಖರೀದಿಸಲು ಖರೀದಿ ಕೇಂದ್ರ ತೆರೆಯಬೇಕು. ಜೊತೆಗೆ ಬೆಂಬಲ ಬೆಲೆ ಘೋಷಿಸಬೇಕು. ಸರ್ಕಾರ ಸ್ಪಂದಿಸದಿದ್ದರೆ ಮುಂದೆ ಗ್ರಾಮ ಮಟ್ಟದಲ್ಲೂ ಹೋರಾಟ ಮಾಡಲಾಗುವುದು.
>
> - ಹೆಚ್.ಕೆ.ಸುರೇಶ್, ಶಾಸಕ

> ಮೆಕ್ಕೆ ಜೋಳಕ್ಕೆ ಬೆಂಬಲ ಇಲ್ಲ, ಕೃಷಿ ಸಚಿವರು ಪರಿಶೀಲನೆಗೆ ಬಂದಿಲ್ಲ, ಪರಿಹಾರವನ್ನೂ ನೀಡಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿ.6 ರಂದು ಜಿಲ್ಲೆಗೆ ಬರುವುದರೊಳಗೆ ಬೆಂಬಲ ಬೆಲೆ ಘೋಷಿಸಬೇಕು. ಇಲ್ಲದಿದ್ದರೆ ಸರ್ಕಾರ ರೈತ ವಿರೋಧಿ ನೀತಿ ಖಂಡಿಸಿ ಅಧಿವೇಶನದಲ್ಲಿ ಹೋರಾಟ ಮಾಡಲಾಗುವುದು.
>
> - ಸಿಮೆಂಟ್ ಮಂಜು, ಶಾಸಕ

# ಆಡಳಿತ ಮಂಡಳಿ ಜಟಾಪಟಿ : ಬ್ರಿಗೇಡ್ ಕಾಲೇಜಿಗೆ ಬೀಗ

## 250ಕ್ಕೂ ಹೆಚ್ಚು ಪಿಯುಸಿ ವಿದ್ಯಾರ್ಥಿಗಳ ಭವಿಷ್ಯ ಅತಂತ್ರ | ಆತಂಕದಲ್ಲಿ ಪೋಷಕರು

• ಪ್ರಜೋದಯ ವರದಿ

**ಹಾಸನ:** ಆಡಳಿತ ಮಂಡಳಿಯ ಸದಸ್ಯರ ನಡುವಿನ ಜಟಾಪಟಿಯಿಂದಾಗಿ ಖಾಸಗಿ ಕಾಲೇಜಿಗೆ ಬೀಗ ಬಿದ್ದಿದ್ದು, ಅಲ್ಲಿ ವ್ಯಾಸಂಗ ಮಾಡುತ್ತಿದ್ದ 250ಕ್ಕೂ ಹೆಚ್ಚು ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗಿದೆ.

ಕಾಲೇಜು ಕಟ್ಟಡದ ಬಾಡಿಗೆ ಬಾಕಿ, ಷೇರು ವಿವಾದ, ಕೋರ್ಟ್ ತಕರಾರು ಸೇರಿ ಇತರೆ ಆಡಳಿತಾತ್ಮಕ ಗೊಂದಲದ ಕಾರಣಕ್ಕೆ ನಗರ ಹೊರವಲಯದ ಮಣಚನಹಳ್ಳಿ ಗೇಟ್ ಬಳಿ ಇರುವ ಬ್ರಿಗೇಡ್ ಪದವಿ ಪೂರ್ವ ಕಾಲೇಜಿಗೆ ಬೀಗ ಹಾಕಿರುವುದರಿಂದ ಕಳೆದ 2 ದಿನಗಳಿಂದ ತರಗತಿಗಳು ನಡೆಯದೇ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಹಾಗು ಪೋಷಕರು ಆತಂಕದಲ್ಲಿದ್ದಾರೆ.



**ಏನಿದು ಗೊಂದಲ**

ಕಾಲೇಜು ಕಟ್ಟಡದ ಬಾಡಿಗೆಯನ್ನು ಹಲವು ತಿಂಗಳಿನಿಂದ ಆಡಳಿತ ಮಂಡಳಿಯವರು ಪಾವತಿಸದ ಹಿನ್ನಲೆ ಕಟ್ಟಡದ ಮಾಲೀಕರು ನೋಟೀಸ್ ನೀಡಿದ್ದರು. ಬಾಡಿಗೆ ಪಾವತಿಸಲು ಸಾಧ್ಯವಾಗದಿದ್ದಾಗ, ಕಾಲೇಜನ್ನು ಮೈಲ್ ಸ್ಟೋನ್ ಅಕಾಡೆಮಿಗೆ ಮಾರಾಟ ಮಾಡಲು ಕಾಲೇಜಿನ ಕಾರ್ಯದರ್ಶಿ ಚಂದನ್ ಹಾಗು ಪ್ರಾಂಶುಪಾಲ ವಿಜಯ್‌ಶಂಕರ್ ಅವರು ಒಪ್ಪಂದ ಮಾಡಿಕೊಂಡಿದ್ದರು. ಅದಕ್ಕೆ ಬ್ರಿಗೇಡ್ ಕಾಲೇಜಿನ ಮತ್ತೊಬ್ಬ ಷೇರುದಾರ ಹೇಮಂತ್ ಎಂಬುವವರು ವಿರೋಧ ವ್ಯಕ್ತಪಡಿಸಿದ್ದರು.

ಈ ನಡುವೆ ಕಳೆದ ಮೂರು ತಿಂಗಳಿನಿಂದ ಬ್ರಿಗೇಡ್ ಪದವಿ ಪೂರ್ವ ಕಾಲೇಜನ್ನು ಮೈಲ್‌ಸ್ಟೋನ್ ಅಕಾಡೆಮಿ ನಡೆಸುತ್ತಿತ್ತು. ಅದನ್ನು ಪ್ರಶ್ನಿಸಿ ಷೇರುದಾರ ಹೇಮಂತ್ ಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯ ಮೈಲ್ ಸ್ಟೋನ್ ಅಕಾಡೆಮಿ, ಕಾಲೇಜು ನಡೆಸಲು ತಡೆಯಾಜ್ಞೆ ನೀಡಿದೆ. ಹೀಗಾಗಿ ಮೈಲ್‌ಸ್ಟೋನ್ ಅಕಾಡೆಮಿ ಕಾಲೇಜು ಉಸ್ತುವಾರಿಯಿಂದ ವಾಪಾಸ್ಸಾಗಿದೆ. ಇದೇ ಕಾರಣಕ್ಕೆ ಒಂದು ವಾರದಿಂದ ಉಪನ್ಯಾಸಕರು ಕಾಲೇಜಿಗೆ ಬರುತ್ತಿರಲಿಲ್ಲ. ಆದರೀಗ ಎರಡು ದಿನಗಳಿಂದ ಕಾಲೇಜನ್ನೇ ಮುಚ್ಚಿರುವುದರಿಂದ ಸ್ಥಳಕ್ಕೆ ಬಂದ ವಿದ್ಯಾರ್ಥಿಗಳು, ಪೋಷಕರು ಆಡಳಿತ ಮಂಡಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಈ ಗೊಂದಲದ ಸಂಬಂಧ ಕಾಲೇಜಿನ ಪ್ರಾಂಶುಪಾಲರು ಹಾಗು ಕಾರ್ಯದರ್ಶಿಗೆ ಪೋಷಕರು ಕರೆ ಮಾಡಿದರೆ ಕರೆ ಸ್ವೀಕರಿಸುತ್ತಿಲ್ಲ. ಈ ಗೊಂದಲದಿಂದ ಪೋಷಕರು ಮತ್ತಷ್ಟು ಆತಂಕಕ್ಕೆ ಒಳಗಾಗಿದ್ದಾರೆ. ಕಾಲೇಜಿನ ಗೇಟಿಗೆ ಬೀಗ ಹಾಕಿರುವುದರಿಂದ ಅನೇಕರು ಸ್ಥಳಕ್ಕೆ ಬಂದು ನಿರಾಸೆಯಿಂದ ಹಿಂದಿರುಗುತ್ತಿದ್ದು, ಈ ನಡುವೆ ಅನೇಕ ವಿದ್ಯಾರ್ಥಿಗಳು ಮನೆಯಲ್ಲೇ ಇದ್ದು ತಮ್ಮ ಮುಂದಿನ ಶೈಕ್ಷಣಿಕ ಬದುಕು ಹೇಗೆಂಬ ಆತಂಕಕ್ಕೆ ಸಿಲುಕಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಕೆ.ಪಿ.ಗಂಗಾಧರ್ ಅವರು, ಬ್ರಿಗೇಡ್ ಕಾಲೇಜಿಗೆ ಬೀಗ ಹಾಕಿರುವ ಬಗ್ಗೆ ದೂರುಗಳು ಬಂದಿಲ್ಲ. ಪೋಷಕರು ಅಥವಾ ವಿದ್ಯಾರ್ಥಿಗಳು ದೂರು ನೀಡಿದರೆ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ.

# ಪಾಕಿಸ್ತಾನದ ದುಷ್ಟ ಕೃತ್ಯಕ್ಕೆ ಕಾಂಗ್ರೆಸ್ ಕುಮ್ಮಕ್ಕು

## ಶ್ರೀರಾಮ ಸೇನೆ ಮುಖಂಡ ಪ್ರಮೋದ್ ಮುತಾಲಿಕ್ ಆಕ್ರೋಶ | ಬೇಲೂರಿನಲ್ಲಿ ಬೈಕ್ ರ‍್ಯಾಲಿ

• ಪ್ರಜೋದಯ ವರದಿ

**ಬೇಲೂರು:** ಪಾಕಿಸ್ತಾನದ ರಕ್ತ ಬೀಜಾಸುರರು ಭಾರತದಲ್ಲಿ ನಡೆಸುವ ದುಷ್ಟ ಕೃತ್ಯಗಳಿಗೆ ಓಟಿನಾಸೆಗೆ ಕಾಂಗ್ರೆಸ್ ಕುಮ್ಮಕ್ಕು ನೀಡುತ್ತಲೇ ಬಂದಿದೆ. ಇನ್ನು ಮುಂದೆ ಅಂತಹ ಕುತಂತ್ರಗಳಿಗೆ ಅವಕಾಶ ಮಾಡಿಕೊಡುವುದಿಲ್ಲವೆಂದು ಶ್ರೀ ರಾಮ ಸೇನೆ ಸಂಸ್ಥಾಪಕ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಅವರು ಎಚ್ಚರಿಕೆ ನೀಡಿದರು.

ಪಟ್ಟಣದ ಚನ್ನಕೇಶವಸ್ವಾಮಿಸ್ವಾಮಿ ದೇವಾಲಯ ಆವರಣದಲ್ಲಿ ಸೋಮವಾರ ರಾತ್ರಿ ವಿಶ್ವ ಹಿಂದೂ ಪರಿಷತ್ ಮತ್ತು ಭಜರಂಗದಳ ವತಿಯಿಂದ ದತ್ತಮಾಲಾ ಅಭಿಯಾನ, ದತ್ತ ಜಯಂತಿ ಅಂಗವಾಗಿ ನಡೆದ ಬೃಹತ್ ಬೈಕ್ ಜಾಥಾ ಬಳಿಕ ಬಹಿ





ರಂಗ ಸಮಾವೇಶದಲ್ಲಿ ಮಾತನಾಡಿದ ಅವರು, ಸುಪ್ರೀಂ ಕೋರ್ಟ್ ಹಿಂದೂಗಳ ಆಸ್ತಿ ಧಾರ್ಮಿಕ ದತ್ತಿ ಇಲಾಖೆಗೆ ಒಳಪಟ್ಟಿದೆ ಎಂದು ಆದೇಶ ಹೊರಡಿಸಿದೆ. ಆದರೆ, ದತ್ತಪೀಠದಲ್ಲಿ ಒಂದು ಕುಟುಂಬ 6 ಸಾವಿರ ಎಕರೆ ಕಬಳಿಸಲು ಯತ್ನಿಸುತ್ತಿದೆ. ಷಡ್ಯಂತ್ರದ ಭಾಗವಾಗಿ ಸ್ಥಳದಲ್ಲಿ ಗೋರಿ ಇದೆ ಎಂದು ಸುಳ್ಳು ಹೇಳುತ್ತ ಬಂದಿದೆ. ಆದರೆ ಅದಕ್ಕೆ ಯಾವ ಪುರಾವೆಗಳಿಲ್ಲವೆಂದರು.

» ನಾಲ್ಕನೇ ಪುಟದಲ್ಲಿ

# ಯಡಿಯೂರಪ್ಪಗೆ ಸುಪ್ರೀಂ ಕೋರ್ಟ್ ರಿಲೀಫ್

• ಪ್ರಜೋದಯ ವರದಿ

**ನವದೆಹಲಿ:** ಪೋಕ್ಸೊ ಪ್ರಕರಣದ ಆರೋಪಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ವಿರುದ್ಧ ಬೆಂಗಳೂರಿನ ಎಫ್‌ಟಿಎಸ್ ವಿಶೇಷ ಸೆಷನ್ ನ್ಯಾಯಾಲಯ ಹೊರಡಿಸಿದ್ದ ಸಮನ್ ಹಾಗು ವಿಚಾರಣಾ ಪ್ರಕ್ರಿಯೆಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಪೀಠ ತಡೆಯಾಜ್ಞೆ ನೀಡಿದೆ.

ಪ್ರಕರಣದ ಆರೋಪಿಗಳಾದ ಬಿ.ಎಸ್.ಯಡಿಯೂರಪ್ಪ, ವೈ.ಎಂ.ಅರುಣ, ಎಂ.ರುದ್ರೇಶ ಹಾಗು ಜಿ.ಮರಿಸ್ವಾಮಿ ಅವರಿಗೆ ಸಮನ್ಸ್ ಜಾರಿಗೊಳಿಸಿದ್ದ ವಿಶೇಷ ಸೆಷನ್ ನ್ಯಾಯಾಲಯವು ಡಿ.2ರಂದು ಕೋರ್ಟ್‌ಗೆ ಖುದ್ದು ಹಾಜರಾಗುವಂತೆ ಆದೇಶಿಸಿತ್ತು. ಈ ಸಂಬಂಧ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ಎನ್.ನಾಯಕ್ ಪ್ರಸ್ತುತ ಪಡಿಸಿದ ಅರ್ಜಿಯನ್ನು ಪುರಸ್ಕರಿಸಿದ ಬೆಂಗಳೂರಿನ ಎಫ್‌ಟಿಎಸ್ ವಿಶೇಷ ಕೋರ್ಟ್ 1ರ ನ್ಯಾಯಾಧೀಶೆ ಸುಜಾತಾ ಅವರು 30 ದಿನಗಳ ಒಳಗಾಗಿ ಸಾಕ್ಷಿ ವಿಚಾರಣೆ ಆಗಬೇಕೆಂಬ ಕಾರಣಕ್ಕೆ ಸಮನ್ಸ್ ಜಾರಿಗೆ ಆದೇಶಿಸಿದ್ದರು.

## 2023-24ನೇ ಸಾಲಿನ ಪ್ರಶಸ್ತಿ ಸ್ವೀಕಾರ | ಕಂದಾಯ ವಸೂಲಾತಿಯಲ್ಲಿ ಪೂರ್ಣ ಪ್ರಗತಿ

# ಹಾನುಬಾಳು ಪಂಚಾಯಿತಿಗೆ ಗಾಂಧಿ ಗ್ರಾಮ ಪುರಸ್ಕಾರ

• ಪ್ರಜೋದಯ ವರದಿ

**ಹಾಸನ:** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ ಹಿನ್ನಲೆಯಲ್ಲಿ ಸಕಲೇಶಪುರ ತಾಲ್ಲೂಕಿನ ಹಾನುಬಾಳು ಗ್ರಾಮ ಪಂಚಾಯಿತಿಗೆ 2023-24ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರ ಒಲಿದು ಬಂದಿದೆ.

ಮಹಾತ್ಮ ಗಾಂಧೀಜಿಯ ಆದರ್ಶಗಳನ್ನು ಕಾರ್ಯರೂಪಕ್ಕೆ ತರಲು ಶ್ರಮಿಸಿದ ಪಂಚಾಯಿತಿಗೆ ದೊರೆತಿರುವ ಮಾನ್ಯತೆ ಗ್ರಾಮಸ್ಥರ ಒಕ್ಕೂಟದ ಶ್ರಮಕ್ಕೆ ಸಿಕ್ಕ ಗೌರವವಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆ.ಆರ್. ಸಂತೋಷ್ ಹಾಗು ಪಿಡಿಓ ಕೆ.ಹರೀಶ್ ಅವರಿಗೆ ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿದರು.

**ಶೇ.100 ಕಂದಾಯ ವಸೂಲಿ**

2024-25ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಯು ಕಂದಾಯ ವಸೂಲಾತಿಯಲ್ಲಿ ಶೇ. 100 ರಷ್ಟು ಪ್ರಗತಿ ಸಾಧಿಸಿ ಮೆಚ್ಚುಗೆಗೆ ಪಾತ್ರವಾಗಿದೆ. ಗ್ರಾಮ ಸ್ವರಾಜ್ ನಿಯಮಾವಳಿಗಳ ಅನ್ವಯ ಸ್ಥಾಯಿ ಸಮಿತಿ ರಚಿಸಲಾಗಿದೆ. 2024-25ನೇ ಸಾಲಿನಲ್ಲಿ ಪಂಚಾಯಿತಿ ಕಲಿಕಾ ಕೇಂದ್ರವಾಗಿ ಆಯ್ಕೆಯಾಗಿದೆ. ಈ ಯೋಜನೆ





ಯಡಿ 7 ಲ.ರೂ. ಅನುದಾನ ಸರ್ಕಾರದಿಂದ ಲಭ್ಯವಾಗಿದ್ದು, ಜೊತೆಗೆ ಸ್ವಂತ ಸಂಪನ್ಮೂಲ ಬಳಸಿ ಅರಿವು ಕೇಂದ್ರ ಮತ್ತು ಗ್ರಾಮ ಪಂಚಾಯಿತಿ ಸಭಾಂಗಣವನ್ನು ಉನ್ನತೀಕರಿಸಲಾಗಿದೆ.

**ಜಿಲ್ಲೆಯ ಪ್ರಥಮ ಡಿಜಿಟಲ್ ಗ್ರಂಥಾಲಯ**

ಗ್ರಾಮ ಪಂಚಾಯಿತಿಗಳಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಗ್ರಂಥಾಲಯಗಳನ್ನು ತೆರೆಯಲಾಗಿದೆ. ಇತ್ತೀಚೆಗೆ ಅದನ್ನು ಉನ್ನತೀಕರಿಸಿ ಡಿಜಿಟಲ್ ಗ್ರಂಥಾಲಯವಾಗಿ ಮಾರ್ಪಾಡು ಮಾಡಲಾಗಿದೆ. ಜಿಲ್ಲೆಯ ಪ್ರಥಮ ಡಿಜಿಟಲ್ ಗ್ರಂಥಾಲಯ ಎಂಬ ಹೆಗ್ಗಳಿಕೆಗೆ ಹಾನುಬಾಳು ಗ್ರಾಮ ಪಂಚಾಯಿತಿ ಪಾತ್ರವಾಗಿದೆ. ಪಂಚಾಯಿತಿಯ ಅರಿವು ಕೇಂದ್ರದಲ್ಲಿ ಒಟ್ಟು 1060 ಜನರು ನೋಂದಣಿಯಾಗಿದ್ದಾರೆ. ಗ್ರಂಥಾಲಯದಲ್ಲಿ 950 ಪುಸ್ತಕಗಳಿವೆ. ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಉಚಿತ ಇಂಟರ್‌ನೆಟ್ ಸೌಲಭ್ಯ ಕಲ್ಪಿಸಲಾಗಿದೆ. ಅರಿವು ಕೇಂದ್ರದ ಮೂಲಕ ಲೀಡ್ ಬ್ಯಾಂಕ್ ಸಹಯೋಗದೊಂದಿಗೆ ಗ್ರಾಮಸ್ಥರಿಗೆ ಆರ್ಥಿಕ ಸಾಕ್ಷರತೆ ಬಗ್ಗೆ ತಿಳವಳಿಕೆ ನೀಡಲಾಗುತ್ತಿದೆ. ಶಾಲಾ ಮಕ್ಕಳಿಗೆ ಒಳಾಂಗಣ ಆಟಗಳು, ರಸಪ್ರಶ್ನೆ, ಪ್ರಬಂಧ ಸ್ಪರ್ಧೆ ನಡೆಸಲಾಗುತ್ತದೆ.

> ಹಾನುಬಾಳು ಗ್ರಾಮ ಪಂಚಾಯಿತಿಯಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕ, ಕೂಸಿನ ಮನೆ, ಅರಿವು ಕೇಂದ್ರ ಯಶಸ್ವಿಯಾಗಿ ನಡೆಯುತ್ತಿದೆ. ತ್ಯಾಜ್ಯ ವಿಲೇವಾರಿಯಲ್ಲಿ ನಾವು ಕೈಗೊಂಡ ಕ್ರಮಗಳು ಇತರರಿಗೆ ಮಾದರಿಯಾಗಿದೆ. ಚುನಾಯಿತ ಪ್ರತಿನಿಧಿಗಳು ಹಾಗು ಗ್ರಾಮಸ್ಥರ ಸಹಕಾರದಿಂದ ಈ ಸಾಧನೆ ಸಾಧ್ಯವಾಗಿದೆ.
>
> -ಕೆ. ಹರೀಶ್, ಪಿಡಿಓ

**ಮಹಿಳಾ ಸ್ನೇಹಿ ವಾತಾವರಣ**

ಮಹಿಳಾ ಮತ್ತು ಹೆಣ್ಣು ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿಯಾಗಿಸಲು ಹಲವು ಯೋಜನೆಗಳನ್ನು ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳು ಹಾಗು ಜನಪ್ರತಿನಿಧಿಗಳು ಹಮ್ಮಿಕೊಂಡಿದ್ದಾರೆ.

ಮಹಿಳಾ ಸ್ವಸಹಾಯ ಸಂಘಗಳ ಮೂಲಕ ಸಂಜೀವಿನಿ ಒಕ್ಕೂಟದಿಂದ ಯಶಸ್ವಿ ಕಸ ವಿಂಗಡಣೆ ಮಾಡಲಾಗುತ್ತಿದೆ. 38 ಸಂಜೀವಿನಿ ಸಂಘಗಳಿದ್ದು, 30 ಲಕ್ಷ ರೂ. ವರೆಗೆ ಸಾಲ ಸೌಲಭ್ಯ ನೀಡಿ ಸ್ವಾವಲಂಬಿ ಬದುಕಿಗೆ ದಾರಿ ಮಾಡಿಕೊಡಲಾಗಿದೆ. ತ್ಯಾಜ್ಯ ನಿರ್ವಹಣೆಯಲ್ಲಿ ಮಹಿಳಾ ಸ್ವಸಹಾಯ ಸಂಘದ ಸದಸ್ಯರನ್ನು ಬಳಸಿಕೊಂಡು ಕಸ ಸಂಗ್ರಹ ಮಾಡಲಾಗುತ್ತಿದೆ. ಪ್ರಸ್ತುತ ವಾಹನ ಚಾಲಕಿ ಮತ್ತು ಕಸ ವಿಂಗಡಣೆ ಮಾಡುವವರಿಗೆ ಸ್ವಸಹಾಯ ಸಂಘದಿಂದಲೇ ವೇತನ ಪಾವತಿಸಲಾಗುತ್ತಿದೆ.

**ಹಲವು ಗ್ರಾ.ಪಂ. ಪ್ರತಿನಿಧಿಗಳ ಭೇಟಿ**


ತ್ಯಾಜ್ಯ ನಿರ್ವಹಣೆಯಲ್ಲಿ ಗ್ರಾಮ ಪಂಚಾಯಿತಿ ಕೈಗೊಂಡಿರುವ ವಿನೂತನ ಕ್ರಮ ಹಾಗು ಮಹಿಳಾ ಪಾಲ್ಗೊಳ್ಳುವಿಕೆಯ ವಿಧಾನ ಅರಿಯಲು ಜಿಲ್ಲೆಯ ಅನೇಕ ಪಂಚಾಯಿತಿಗಳ ಸದಸ್ಯರು ಭೇಟಿ ನೀಡಿದ್ದಾರೆ. ಬಳ್ಳಾರಿ ಜಿಲ್ಲೆ ಓರ್ವಾಯಿ ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳು ಮತ್ತು ಸಿಬ್ಬಂದಿ ಘಟಕ ವೀಕ್ಷಿಸಿರುವುದು ವಿಶೇಷ.

2019-20ನೇ ಸಾಲಿನಿಂದ ಸುಮಾರು 170ಕ್ಕೂ ಹೆಚ್ಚು ಸೋಲಾರ್ ಬೀದಿ ದೀಪ ಅಳವಡಿಸಲಾಗಿದೆ. 5ಕ್ಕೂ ಹೆಚ್ಚು ಸೋಲಾರ್ ಹೈಮಾಸ್ಟ್ ಅಳವಡಿಲಾಗಿದೆ. ಅದರಿಂದ ವಿದ್ಯುತ್ ಕಂಬ ಇಲ್ಲದಿರುವ ಕಡೆ ಬೆಳಕಿನ ವ್ಯವಸ್ಥೆ ಸಾಧ್ಯವಾಗಿದೆ. ವಿದ್ಯುತ್ ವಿಚಾರದಲ್ಲಿ ಪಂಚಾಯಿತಿ ಸ್ವಾವಲಂಬನೆ ಸಾಧಿಸಿದೆ. ಹಾನುಬಾಳು ಪಂಚಾಯಿತಿಗೆ ಈ ಹಿಂದೆ ಬಹಿಲು ಬಹಿರ್ದೆಸೆ ಮುಕ್ತ ಗ್ರಾಮ ಪಂಚಾ ಯಿತಿ, ಕ್ಷಯ ರೋಗ ಮುಕ್ತ ಪಂಚಾಯಿತಿ ಎಂಬ ಪ್ರಶಸ್ತಿಗಳು ಸಂದಿವೆ.

**5297 ಜನಸಂಖ್ಯೆ ಹೊಂದಿರುವ ಗ್ರಾ.ಪಂ.**

ತಾಲ್ಲೂಕು ಕೇಂದ್ರ ಸಕಲೇಶಪುರದಿಂದ 20 ಕಿ.ಮೀ. ದೂರದಲ್ಲಿ ಹಾನುಬಾಳು ಪಂಚಾಯಿತಿ ಇದೆ. 6925.33 ಚ.ಕಿ.ಮೀ. ಭೌಗೋಳಿಕ ವಿಸ್ತೀರ್ಣ ಹೊಂದಿದ್ದು, ಕೃಷಿ ಇಲ್ಲಿನ ಜನರ ಪ್ರಮುಖ ಕಸುಬು. ಒಟ್ಟು 18 ಗ್ರಾಮಗಳಿದ್ದು ಅದರಲ್ಲಿ 8 ಕಂದಾಯ ಮತ್ತು 10 ದಾಖಲೆ ಗ್ರಾಮಗಳಿವೆ. 2011ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ 5291 ಹಾಗು ಸಾಕ್ಷರತೆ ಪ್ರಮಾಣ ಶೇ.94. ವ್ಯಾಪ್ತಿಯಲ್ಲಿ 8 ಕಿರಿಯ ಪ್ರಾಥಮಿಕ ಶಾಲೆ, 2 ಹಿರಿಯ ಪ್ರಾಥಮಿಕ ಶಾಲೆ, 2 ಪ್ರೌಢ ಶಾಲೆಗಳಿವೆ. ಪದವಿ ಪೂರ್ವ ಕಾಲೇಜು 1 ಮತ್ತು 12 ಅಂಗನವಾಡಿ ಕೇಂದ್ರಗಳಿವೆ. ಪ್ರಾಥಮಿಕ ಆರೋಗ್ಯ ಕೇಂದ್ರ, ಪಶು ಆಸ್ಪತ್ರೆ, ಮತ್ತು ಅಂಚೆ ಕಚೇರಿಯನ್ನು ಒಳಗೊಂಡಿದೆ. 13 ಸದಸ್ಯರನ್ನು ಹೊಂದಿರುವ ಗ್ರಾಮ ಪಂಚಾಯಿತಿಗೆ 9 ಜನರು ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

# ನಿಯಂತ್ರಣ ತಪ್ಪಿ ಕೆರೆಗೆ ಬಿದ್ದ ಕಾರು




• ಪ್ರಜೋದಯ ವರದಿ

**ಹಾಸನ :** ಚಾಲಕನ ನಿಯಂತ್ರಣ ತಪ್ಪಿ ಕಾರು ಕೆರೆಗೆ ಬಿದ್ದಿದ್ದು, ಅದೃಷ್ಟವಶಾತ್ ಕಾರಿನಲ್ಲಿದ್ದವರು ಪ್ರಾಣಾಪಾಯ ದಿಂದ ಪಾರಾಗಿರುವ ಘಟನೆ ಹೊರವಲಯದ ಹರಳಹಳ್ಳಿಯಲ್ಲಿ ನಡೆ ದಿದೆ.

ಹರಳಹಳ್ಳಿ ಕೆರೆಯ ಏರಿ ಮೇಲೆ ವೇಗವಾಗಿ ಬರುತ್ತಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ, ಏಕಾಏಕಿ ಕೆರೆಗೆ ಬಿದ್ದಿದೆ. ಕಾರಿನಲ್ಲಿದ್ದ ಇಬ್ಬರು ಹೊರ ಬಂದು ಜೀವ ಉಳಿಸಿಕೊಂಡಿದ್ದಾರೆ. ಕೆಲವೇ ಕ್ಷಣದಲ್ಲಿ ಕಾರು ಕೆರೆಯಲ್ಲಿ ಮುಳುಗಿದೆ. ಬಳಿಕ ಕ್ರೇನ್ ಮೂಲಕ ಕಾರನ್ನು ಮೇಲೆತ್ತ ಲಾಯಿತು.

ಕೆರೆ ಏರಿಗೆ ತಡೆಗೋಡೆ ಇಲ್ಲದಿರುವುದರಿಂದ ಅವಘಡಗಳು ಸಂಭವಿಸುತ್ತಿವೆ. ತಡೆಗೋಡೆ ನಿರ್ಮಾಣ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ದೊಡ್ಡ ಅವಘಡ ಸಂಭವಿಸುವ ಮೊದಲೇ ಸಂಬಂಧಪಟ್ಟವರು ಎಚ್ಚೆತ್ತು ಕೊಳ್ಳಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

# ವೇಳೆ ಬರೋವರೆಗೂ ತಾಳ್ಮೆಯಿಂದ ಕೆಲಸ ಮಾಡುತ್ತಿರಬೇಕು!



■ **ಸಮಾಜದ ಕಟ್ಟುಕಟ್ಟಳೆಗಳಂತೆ ನಡೆಯುತ್ತಿಲ್ಲ ಎಂದ ತಕ್ಷಣ ಅವರನ್ನು ಕುರಿತು ಋಣಾತ್ಮಕ ಮಾತುಗಳು ಕೂಡ ಶುರುವಾಗಿಬಿಡುತ್ತವೆ. ಹುಟ್ಟು, ಶಾಲೆ, ಶಿಕ್ಷಣ, ಯೌವನ, ಮದುವೆ, ನಂತರ ಮಕ್ಕಳು, ಆಮೇಲೆ ಆ ಮಕ್ಕಳನ್ನು ಸಾಕಲು ದುಡಿಮೆ, 60 ಅಥವಾ 65ಕ್ಕೆ ನಿವೃತ್ತಿ, ಆಯಸ್ಸು ಇರುವವರೆಗೆ ಕುಳಿತು ತಿಂದು, ವೇಳೆ ಕಳೆದು ಹೊರಟುಬಿಡುವುದು. ಇದು ಅಲಿಖಿತ ನಿಯಮ.**

ವಿಶ್ವರಂಗ ಈ ಜಗತ್ತು ಒಂದು ಫಾರ್ಮ್ಯಾಟ್ ಮಾಡಿಕೊಂಡುಬಿಟ್ಟಿದೆ. ಹೀಗೆ ಬದುಕಬೇಕು ಎನ್ನುವುದು ಕಡ್ಡಾಯವಲ್ಲ. ಆದರೆ ನಾವೆ ಒಂದು ರೀತಿಯಲ್ಲಿ ಸಮೂಹ ಸನ್ನಿಗೆ ಸಿಕ್ಕವರಂತೆ ಸಿದ್ದಸೂತ್ರಗಳಿಗೆ, ಸಮಾಜ ಸೃಷ್ಟಿಸಿರುವ ಫಾರ್ಮುಲಾ, ಪ್ಯಾಟ್ರನ್‌ಗಳಿಗೆ ಕಟ್ಟು ಬೀಳುತ್ತೇವೆ. ನೀವೇ ಗಮನಿಸಿ ನೋಡಿ, ಇಂಥ ವರ್ತುಲದಿಂದ ಹೊರಬಂದವರ ಸಂಖ್ಯೆ ಬಹಳ ಕಡಿಮೆ.

ಸಮಾಜದ ಕಟ್ಟುಕಟ್ಟಳೆಗಳಂತೆ ನಡೆಯುತ್ತಿಲ್ಲ ಎಂದ ತಕ್ಷಣ ಅವರನ್ನು ಕುರಿತು ಋಣಾತ್ಮಕ ಮಾತುಗಳು ಕೂಡ ಶುರುವಾಗಿಬಿಡುತ್ತವೆ. ಹುಟ್ಟು, ಶಾಲೆ, ಶಿಕ್ಷಣ, ಯೌವನ, ಮದುವೆ, ನಂತರ ಮಕ್ಕಳು, ಆಮೇಲೆ ಆ ಮಕ್ಕಳನ್ನು ಸಾಕಲು ದುಡಿಮೆ, 60 ಅಥವಾ 65ಕ್ಕೆ ನಿವೃತ್ತಿ, ಆಯಸ್ಸು ಇರುವವರೆಗೆ ಕುಳಿತು ತಿಂದು, ವೇಳೆ ಕಳೆದು ಹೊರಟುಬಿಡುವುದು. ಇದು ಅಲಿಖಿತ ನಿಯಮ.

ಈ ಫಾರ್ಮ್ಯಾಟ್ ಮೀರಿ ಬದುಕಿದವರ ಸಂಖ್ಯೆ ಅತ್ಯಲ್ಪ. ಕರ್ನಲ್ ಸ್ಯಾಂಡರ್ಸ್ ಈ ಚೌಕಟ್ಟು ಮೀರಿ ಬದುಕಿದ ಅಸಾಮಾನ್ಯ. ಆತನ ಜೀವನ ಪಯಣ ಏಳು-ಬೀಳು ಎನ್ನುವುದಕ್ಕಿಂತ ಬೀಳು ಹೆಚ್ಚಿತ್ತು ಎನ್ನಬಹುದು. ಬಿದ್ದವರು ಏಳಲೇಬೇಕು, ಅದು ಪ್ರಕೃತಿ ನಿಯಮ. ಆದರೆ ಸಮಾಜ ಹೇಳುವಂತೆ ಅದಕ್ಕೆ ಸಮಯದ ಚೌಕಟ್ಟು ತೊಡಿಸಬಾರದು.

ನಾವು ಕ್ವಿಟ್ ಹೇಳುವುದಕ್ಕೆ ಮುಂಚೆ ನಮ್ಮ ಸಮಯ ಬರುವವರೆಗೆ ಕಾಯಬೇಕು. ಕರ್ನಲ್ ಸ್ಯಾಂಡರ್ಸ್ ಹೆಸರು ಕೇಳಿದರೆ ಯಾರಿವರು? ಎನ್ನುವ ಪ್ರಶ್ನೆ ನಿಮ್ಮ ಮನಸ್ಸಿನಲ್ಲಿ ಉತ್ಪನ್ನವಾಗಿರುತ್ತದೆ. ಅದೇ ಕೆಂಟುಕಿ ಫ್ರೈಡ್ ಚಿಕನ್ ಅಥವಾ ಕೆಎಫ್‌ಸಿ ಎಂದರೆ, ಓಹ್ ಅದಾ, ನನಗೆ ಗೊತ್ತು ಎಂದು ಉದ್ಗಾರ ಹೊರಡಿಸುತ್ತಿರಿ. ಕರ್ನಲ್ ಸ್ಯಾಂಡರ್ಸ್ ಕೆಎಫ್‌ಸಿಯ ಜನಕ. ಇವತ್ತಿಗೆ 145ಕ್ಕೂ ಹೆಚ್ಚು ದೇಶಗಳಲ್ಲಿ 29 ಸಾವಿರಕ್ಕೂ ಹೆಚ್ಚು ಮಳಿಗೆಗಳನ್ನು ಕೆಎಫ್ಸಿ ಹೊಂದಿದೆ.

ಹತ್ತಿರತ್ತಿರ 13 ಬಿಲಿಯನ್ ಅಮೆರಿಕನ್ ಡಾಲರ್ ಮೌಲ್ಯವುಳ್ಳ ಸಂಸ್ಥೆ ಇದಾಗಿದೆ. ವಾರ್ಷಿಕ ಆದಾಯವೇ ಹತ್ತಿರತ್ತಿರ 3 ಬಿಲಿಯನ್ ಡಾಲರ್ ಎಂದರೆ ಅದೆಷ್ಟು ದೊಡ್ಡದು ಎನ್ನುವುದನ್ನು ಮನಗಾಣಬಹುದು. ಜಗತ್ತಿನಲ್ಲಿ 197 ದೇಶಗಳಿವೆ ಅದರಲ್ಲಿ 147 ದೇಶಗಳಲ್ಲಿ ಕೆಎಫ್ಸಿ ಇದೆ ಎಂದರೆ, ಅದರ ನೆಟ್ ವರ್ಕ್ ಎಷ್ಟು ದೊಡ್ಡದು ಎನ್ನುವುದನ್ನು ನಾವು ತಿಳಿಯಬಹುದು.

ಚೀನಾದಂಥ ಕರ್ಮಠ ಕಮ್ಯುನಿಸ್ಟ್ ದೇಶದಲ್ಲಿ ಕೂಡ ಈ ಸಂಸ್ಥೆ ನುಸುಳಿದೆ. ಅಷ್ಟೇ ಅಲ್ಲದೆ 10 ಸಾವಿರ ಮಳಿಗೆಯನ್ನು ಕೇವಲ ಚೀನಾ ದೇಶವೊಂದರ ಹೊಂದಿರುವುದು ಅಸಾಮಾನ್ಯ ಸಾಧನೆ. ಜಾಗತಿಕವಾಗಿ ಈ ಸಂಸ್ಥೆ 8 ಲಕ್ಷಕ್ಕೂ ಹೆಚ್ಚಿನ ಜನರಿಗೆ ಉದ್ಯೋಗವನ್ನು ನೀಡಿದೆ.

ಸೆಪ್ಟೆಂಬರ್ 9, 1890ರಲ್ಲಿ ಅಮೆರಿಕದ ಇಂಡಿಯಾನಾ ಎನ್ನುವ ಪ್ರದೇಶದಲ್ಲಿ ಸ್ಯಾಂಡರ್ಸ್ ಅವರ ಜನನವಾಗುತ್ತದೆ. ಮೂರು ಮಕ್ಕಳಲ್ಲಿ ಸ್ಯಾಂಡರ್ಸ್ ಮೊದಲನೆಯವರು. ಅಪ್ಪ ಕಟುಕ ಅಂದರೆ ಬುಚ್ಚರ್, ಮಾಂಸ ಮಾರುವ ವೃತ್ತಿಯಲ್ಲಿ ತೊಡಗಿರುತ್ತಾರೆ. ಅಮ್ಮ ಗೃಹಿಣಿ. ಬಾಲಕ ಸ್ಯಾಂಡರ್ಸ್ ಆರು ವರ್ಷದವನಾಗಿಗ ಅಪ್ಪನ ಮರಣವಾಗುತ್ತದೆ.

ಅವರಮ್ಮ ಸಂಸಾರದ ಭಾರವನ್ನು ಹೊರುತ್ತಾರೆ. ಕೃಷಿ ಕೆಲಸಕ್ಕೆ ಅವರು ಹೋಗುತ್ತಿರುತ್ತಾರೆ. ಹೀಗಾಗಿ ಒಡಹುಟ್ಟಿದವರ ಲಾಲನೆ, ಪೋಷಣೆ ಸ್ಯಾಂಡರ್ಸ್ ಪಾಲಿಗೆ ಬರುತ್ತದೆ. ಅವರಿಗೆ ಊಟ ಸಿದ್ಧಪಡಿಸುವುದು, ತಿನ್ನಿಸುವುದು ಇತರ ಎಲ್ಲಾ ಕಾರ್ಯಗಳನ್ನು ಸ್ಯಾಂಡರ್ಸ್ ಮಾಡಬೇಕಾಗುತ್ತದೆ.

ಬದುಕೇ ಹೀಗೆ ನೋಡಿ, ಬಾಲ್ಯದ ದೊಡ್ಡವರ ಜವಾಬ್ದಾರಿಯನ್ನು ಹಾಕುತ್ತದೆ. ಬದುಕು ಕಲಿಸುವ ಪಾಠದ ಮುಂದೆ ಬೇರೆಲ್ಲವೂ ಗೌಣ. ಅಮ್ಮ ತೀರಾ ದೈವಭಕ್ತೆ ಆದ ಕಾರಣ ಅಲ್ಕೋಹಾಲ್, ಸಿಗರೇಟು, ಕಾಫಿ ಸೇವನೆ, ಸುಳ್ಳು ಹೇಳುವುದು, ಸೀಟಿ ಹೊಡೆಯುವುದು ಕೂಡ ಮಾಡದಂತೆ ಕಟ್ಟುನಿಟ್ಟಾಗಿ ಬೆಳೆಸುತ್ತಾರೆ. ಸ್ಯಾಂಡರ್ಸ್ 12ರ ಹರೆಯದಲ್ಲಿದ್ದಾಗ ಆತನ ತಾಯಿ ಬೇರೊಂದು ಮದುವೆಯಾಗುತ್ತಾರೆ.

ಇದು ಬಾಲಕ ಸ್ಯಾಂಡರ್ಸ್‌ಗೆ ಇಷ್ಟವಾಗುವುದಿಲ್ಲ. ಹೀಗಾಗಿ ಮನೆಬಿಟ್ಟು ಹೋಗುತ್ತಾರೆ. ಆ ವಯಸ್ಸಿನಲ್ಲಿ ಬೇರಾವ ಕೆಲಸ ಸಿಕ್ಕೀತು? ಅದರಲ್ಲೂ ಸ್ಯಾಂಡರ್ಸ್‌ಗೆ ಗಣಿತ ಎಂದರೆ ಭಯ. ಕೃಷಿ ಕೆಲಸಕ್ಕೆ ಸೇರಿಕೊಳ್ಳುತ್ತಾರೆ. ಹೆಚ್ಚು ಕಾಲ ಕೆಲಸ ಮಾಡಲು ಒಪ್ಪಿದ ಎನ್ನುವ ಕಾರಾಣಕ್ಕೆ ಇರಲು ಜಾಗದ ಜತೆಗೆ ಮಾಸಿಕ ಹತ್ತು ಡಾಲರ್ ವೇತನವನ್ನು ಆತ ಅಂದಿಗೆ ಪಡೆಯುತ್ತಾರೆ.

15ನೇ ವಯಸ್ಸಿನವರೆಗೆ ಅಲ್ಲಿ ಕೆಲಸ ಮಾಡಿ ನಂತರ 16ರಲ್ಲಿ ಮಿಲಿಟರಿಗೆ ಸೇರೋಣ ಎಂದು ಹೋಗುತ್ತಾರೆ. ಆದರೆ ಚಿಕ್ಕ ವಯಸ್ಸು ಎನ್ನುವ ಕಾರಣದಿಂದ ಅಲ್ಲಿ ಸೇರಿಸಿಕೊಳ್ಳುವುದಿಲ್ಲ. ಮುಂದೆ ಅವರಿಗೆ ಮಿಲಿಟರಿ ಸೇರಲು ಅವಕಾಶ ಕೂಡ ಸಿಗುವುದಿಲ್ಲ. ಆದರೂ ಅವರ ಹೆಸರಿನಲ್ಲಿ ಕರ್ನಲ್ ಹೆಸರಿದೆ. ಸಮಾಜಕ್ಕೆ, ಕಮ್ಯುನಿಟಿಗೆ ಅವರು ನೀಡಿದ ಕೊಡುಗೆಯನ್ನು ಗಮನಿಸಿ ಕೆಂಟುಕಿ ಗವರ್ನರ್ ನೀಡಿದ ಸ್ಟೇಟ್ ಟೈಟಲ್ ಇದಾಗಿದೆ.

ಮಿಲಿಟರಿ ಸೇರಲು ಆಗುವುದಿಲ್ಲ ಆದರೆ ರೈಲ್ವೇಸ್ ನಲ್ಲಿ ಕಲ್ಲಿದ್ದಲು ಎತ್ತಿಹಾಕುವ ಕೆಲಸಕ್ಕೆ ಸೇರಿಕೊಳ್ಳುತ್ತಾರೆ. ಸ್ಯಾಂಡರ್ಸ್‌ಗೆ ಚಿಕ್ಕ ವಯಸ್ಸಿನಿಂದ ಶುಚಿಯಾಗಿರುವುದು ಬಹಳ ಇಷ್ಟ. ಹೀಗಾಗಿ ಆತ ಕಲ್ಲಿದ್ದಲು ಎತ್ತುವ ಕೆಲಸಕ್ಕೆ ಕೂಡ ಬಿಳಿ ಬಟ್ಟೆಯನ್ನು ಧರಿಸಿ ಹೋಗುತ್ತಿದ್ದರಂತೆ. ಅಲ್ಲದೆ ಅದನ್ನು ಹಾಗೆ ಶುಚಿಯಾಗಿ ಇರಿಸಿಕೊಂಡು ಬರುತ್ತಿದ್ದರಂತೆ!

ನಿಧಾನಕ್ಕೆ ಅಲ್ಲಿನ ಕೆಲಸದಲ್ಲಿ ಇನ್ನಷ್ಟು ಸ್ಕಿಲ್ ಕಲಿತು ಮೇಲ್ಮಟ್ಟಕ್ಕೆ ಏರುತ್ತಿರುತ್ತಾರೆ. ಆದರೆ ಸ್ಯಾಂಡರ್ಸ್‌ಗೆ ಮೂಗಿನ ತುದಿಯಲ್ಲಿ ಕೋಪ. ಅಲ್ಲಿನ ಮ್ಯಾನೇಜರ್ ಜತೆಗೆ ಕಿತ್ತಾಟ ಮಾಡಿಕೊಳ್ಳುತ್ತಾರೆ. ಅಲ್ಲಿಂದ ಕೆಲಸ ಕಳೆದುಕೊಳ್ಳುತ್ತಾರೆ. 21ರ ವಯಸ್ಸಿನ ಆಜುಬಾಜಿನಲ್ಲಿ ಕರೆಸ್ಪಾಂಡೆನ್ಸ್ ಮೂಲಕ ಕಾನೂನು ಪದವಿಯನ್ನು ಪಡೆಯುತ್ತಾರೆ. ಆದರೆ ಈ ವೃತ್ತಿಯನ್ನು ಹೆಚ್ಚು ಕಾಲ ಮಾಡಲಾಗುವುದಿಲ್ಲ.

ಕ್ಲೈಂಟ್ ಜತೆಯಲ್ಲಿ ಕೋರ್ಟ್ ಆವರಣದಲ್ಲಿ ಕಿತ್ತಾಟ ಮಾಡಿಕೊಳ್ಳುತ್ತಾರೆ. ಹೀಗಾಗಿ ವಕೀಲ ವೃತ್ತಿಯಿಂದ ನಿವೃತ್ತಿ ಪಡೆಯುತ್ತಾರೆ. ಒಂದಲ್ಲ, ಎರಡಲ್ಲ ಹತ್ತಾರು ಸ್ವಂತ ಉದ್ದಿಮೆಗಳನ್ನು ತೆರೆಯುತ್ತಾರೆ. ಸೋಲು ಎನ್ನುವುದು ಸದಾ ಎಲ್ಲದರಲ್ಲೂ ಅವರ ಜತೆಯಾಗುತ್ತದೆ. ಗ್ಯಾಸ್ ಲೈಟ್ ಸರಬರಾಜು ಮಾಡುವ ಸಂಸ್ಥೆ ಪರವಾಗಿಲ್ಲ ಎನ್ನುವಂತೆ ಇರುತ್ತದೆ. ಆದರೆ ಥಾಮಸ್ ಅಲ್ವ ಎಡಿಸನ್ ಇಲೆಕ್ಟ್ರಿಕ್ ಬಲ್ಬ್ ಕಂಡು ಹಿಡಿದ ಕಾರಣ ಗ್ಯಾಸ್ ಲೈಟ್ ಬೇಡಿಕೆ ಕುಸಿತ ಕಾಣುತ್ತದೆ.




ಬದುಕು ಎಂದರೆ ಇಷ್ಟೇ ನೋಡಿ. ಥಾಮಸ್ ಅಲ್ವ ಎಡಿಸನ್ ಬಲ್ಬ್ ಕಂಡುಹಿಡಿದ ಕಾರಣ ಪ್ರಖ್ಯಾತಿ ಹೊಂದಿ ಹಣದ ಮೇಲೆ ಹಣ ಸಂಪಾದಿಸುತ್ತಿದ್ದರೆ, ಇತ್ತ ಸ್ಯಾಂಡರ್ಸ್ ಇದ್ದ ಬದುಕನ್ನು ಕಳೆದುಕೊಂಡಿದ್ದರು. ಮಳೆ ಬಂದರೆ ಕೆಲವರಿಗೆ ಅನುಕೂಲ, ಖುಷಿ; ಕೆಲವರಿಗೆ ಅದರಿಂದ ಕಷ್ಟ. ಇನ್ನೊಂದು ಪರವಾಗಿಲ್ಲ ಎನ್ನುವ ಉದ್ದಿಮೆ ಎಂದರೆ ಸರೋವರದ ಒಂದು ತುದಿಯಿಂದ ಇನ್ನೊಂದು ತುದಿಗೆ ಪ್ರಯಾಣಿಕರನ್ನು ತಲುಪಿಸಲು ಫೇರಿ ಸರ್ವಿಸ್ ನೀಡುತ್ತಿರುತ್ತಾರೆ. ಅದು ಪರವಾಗಿಲ್ಲ ಎನ್ನುವ ಆದಾಯ ನೀಡುತ್ತದೆ. ಆದರೆ ಎರಡೂ ತುದಿಯನ್ನು ಬೆಸೆಯುವಂತೆ ಸೇತುವೆ ಕಟ್ಟಲಾಗುತ್ತದೆ, ಅದರೊಂದಿಗೆ ಸ್ಯಾಂಡರ್ಸ್ ಅವರ ಈ ವೆಂಚರ್ ಕೂಡ ಸೋಲಿನಲ್ಲಿ ಕೊನೆಗಾಣುತ್ತದೆ. ಆ ನಂತರ ಸೇಲ್ಸ್ ಮ್ಯಾನ್ ಆಗಿ, ಇನ್ಶೂರೆನ್ಸ್ ಮಾರಾಟಗಾರನಾಗಿ ಹತ್ತಾರು ಉದ್ಯೋಗಗಳನ್ನು ಮಾಡುತ್ತಾರೆ.

ಅವೆಲ್ಲವೂ ತಾತ್ಕಾಲಿಕ ಕೆಲಸಗಳು. ಅಂದಿನ ಜೀವನವನ್ನು ಸಾಗಿಸಲು ಅವಶ್ಯಕವಾಗಿ ಮಾಡಬೇಕಾದ ಸ್ಥಿತಿಯಲ್ಲಿ ಮಾಡಿದಂಥವು. ಬದುಕಿನ ಬಂಡಿ ಸಾಗಿಸಲೇಬೇಕಲ್ಲ, ಹೀಗಾಗಿ ಪೆಟ್ರೋಲ್ ಸ್ಟೇಷನ್ ಬಿಸಿನೆಸ್ ಶುರುಮಾಡುತ್ತಾರೆ. ಅದು ಹೇಳಿಕೇಳಿ 1920ರ ಸಮಯ. ಅಂದಿನ ದಿನದಲ್ಲಿ ಅಮೆರಿಕವನ್ನು ಎರಡು ಸಮಸ್ಯೆಗಳು ಬಾಧಿಸಲು ಪ್ರಾರಂಭಿಸಿರುತ್ತವೆ.

ಒಂದು ಬರಗಾಲ, ಎರಡು ಮಹಾನ್ ಆರ್ಥಿಕ ಹಿಜರಿತ. ಇವೆರಡು ಸಮಸ್ಯೆಗಳು ಅಂದಿನ ದಿನದಲ್ಲಿ ಸಾವಿರಾರು ಕುಟುಂಬಗಳನ್ನು ಬಲಿ ಪಡೆದುಕೊಳ್ಳುತ್ತವೆ. 1930ರ ವೇಳೆಗೆ ಕೆಂಟುಕಿಯ ಬೇರೊಂದು ಊರಿಗೆ ಶಿ- ಆಗುತ್ತಾರೆ. ಶೆಲ್ ಆಯಿಲ್ ಸ್ಟೇಷನ್ ನೋಡಿಕೊಳ್ಳುವ ಕೆಲಸ ಅದಾಗಿರುತ್ತದೆ. ಇಲ್ಲಿ ಕೂಡ ಸ್ಯಾಂಡರ್ಸ್ ಮುಂಗೋಪಕ್ಕೆ ಬೆಲೆ ತೆರಬೇಕಾಗುತ್ತದೆ.

ಪ್ರತಿಸ್ಪರ್ಧಿ ಪೆಟ್ರೋಲ್ ಬಂಕ್ ಮಾಲೀಕರೊಂದಿಗೆ ಜಾಹೀರಾತು ಹಾಕುವ ಜಾಗದ ಬಗ್ಗೆ ಕಿತ್ತಾಟವಾಗುತ್ತದೆ. ಅದು ಗನ್‌ಶಾಟ್ ಮೂಲಕ, ಸ್ಯಾಂಡರ್ಸ್ ಸಹಾಯಕನನ್ನು ಬಲಿ ಪಡೆದುಕೊಳ್ಳುವ ಮೂಲಕ ಕೊನೆಯಾಗುತ್ತದೆ. ಕೋರ್ಟು ಸ್ಯಾಂಡರ್ಸ್ ಅವರನ್ನು ನಿರ್ದೋಷಿ ಎಂದು ಬಿಡುಗಡೆ ಮಾಡುತ್ತದೆ. ಪ್ರತಿಸ್ಪರ್ಧಿ ಪೆಟ್ರೋಲ್ ಬಂಕ್ ಮಾಲೀಕನಿಗೆ 18 ವರ್ಷ ಜೈಲುಶಿಕ್ಷೆಯಾಗುತ್ತದೆ. ಈ ಆಯಿಲ್ ಸ್ಟೇಷನ್ ಬಹಳ ಜನನಿಬಿಢ ಪ್ರದೇಶದಲ್ಲಿದ್ದ ಕಾರಣ ಸ್ಯಾಂಡರ್ಸ್ ಇಲ್ಲಿ ಆಹಾರವನ್ನು ತಯಾರಿಸಿ ಮಾರುವುದಕ್ಕೆ ಶುರು ಮಾಡುತ್ತಾರೆ. ಇಲ್ಲಿ ವಿವಿಧ ರೀತಿಯ ಮಾಂಸ ಭಕ್ಷ್ಯಗಳನ್ನು, ಆಲೂಗೆಡ್ಡೆ ತಿನಿಸು ಇತ್ಯಾದಿ ತಯಾರಿಸಿ ಮಾರುತ್ತಾರೆ. ಇಷ್ಟೇ ಆದರೂ ಅವರಿಗೆ ವಿಶ್ವ ಮಾನ್ಯತೆ ತಂದುಕೊಡುವ ಸಿಗ್ನೇಚರ್ ಡಿಶ್ ಫ್ರೈಡ್ ಚಿಕನ್ ಇನ್ನೂ ಉಗಮವಾಗಿರುವುದಿಲ್ಲ.

1940ರ ವೇಳೆಗೆ ಅವರಿಗೆ ಈ ರೆಸಿಪಿ ಸಿದ್ದಿಸುತ್ತದೆ. ಆದರೆ ಅದನ್ನು ಪ್ರಯೋಗ ಮಾಡುವ ಮುನ್ನ ಮತ್ತೊಂದು ಅಡ್ಡಿ ಎದುರಾಗುತ್ತದೆ. ಅದು ಎರಡನೇ ವಿಶ್ವಯುದ್ಧದ ಸಮಯವಾಗಿರುತ್ತದೆ. ಈ ವೇಳೆಗೆ ಸ್ಯಾಂಡರ್ಸ್ 52ರ ಹರೆಯಕ್ಕೆ ಕಾಲಿರಿಸಿರುತ್ತಾರೆ. ಯುದ್ಧ ಮಾಡುವ ಶಕ್ತಿ ಇರುವುದಿಲ್ಲ, ಹೀಗಾಗಿ ಮ್ಯಾನ್ಹಟನ್ ಪ್ರಾಜೆಕ್ಟ್ ನಲ್ಲಿ ಆಹಾರ ತಯಾರಿಕೆಯಲ್ಲಿ ಸಹಾಯ ಮಾಡುತ್ತಾರೆ.

ಯುದ್ಧ ಮುಗಿದ ಮೇಲೆ ಮತ್ತೆ ರೆಸ್ಟೋರೆಂಟ್ ತೆರೆಯುತ್ತಾರೆ. 150 ಜನ ಕೂರಬಹುದಾದ ದೊಡ್ಡ ರೆಸ್ಟೋರೆಂಟ್ ತೆರೆಯುತ್ತಾರೆ. ಅದು ಚೆನ್ನಾಗಿ ನಡೆಯುತ್ತಿರುತ್ತದೆ. ಆದರೆ ಊರನ್ನು ಬಳಸಿ ಹೋಗುವಾಗ ಟ್ರಾಫಿಕ್ ಸಮಸ್ಯೆ ಜಾಸ್ತಿ ಎನ್ನುವ ಕಾರಣಕ್ಕೆ ಹೊಸದಾಗಿ ಫ್ರೀ-ವೇ ನಿರ್ಮಾಣ ಮಾಡುತ್ತಾರೆ.

ಎಲ್ಲಾ ವಾಹನಗಳು ಅಲ್ಲಿ ಓಡಾಡಲು ಶುರುಮಾಡುತ್ತವೆ. ಇವರ ರೆಸ್ಟೋರೆಂಟ್ ಜನರಿಲ್ಲದೆ ಸೊರಗುತ್ತದೆ. ಬದುಕಿನಲ್ಲಿ ನನಗೇನು ಬೇಕು, ಯಾವುದು ಇಷ್ಟ ಎಂದು ತಿಳಿದುಕೊಂಡು ಖುಷಿ ಕೊಡುವ ಕೆಲಸದಲ್ಲಿ ಇದ್ದಾಗ ಮತ್ತೊಂದು ಸೋಲು ಅವರನ್ನು ಬಂದಪ್ಪುತ್ತದೆ. ಈ ವೇಳೆಗೆ 62ರ ವಯಸ್ಸಿನ ಅವರ ಸ್ನೇಹಿತರು ನಿವೃತ್ತಿ ಘೋಷಿಸಿಕೊಂಡು ಆರಾಮಾಗಿರಲು ಶುರುಮಾಡಿರುತ್ತಾರೆ.

ಆದರೆ ಅವರಿಗೆ ಉಳಿಸಿದ ಹಣವಿತ್ತು, ಅಲ್ಲದೆ ಒಂದಷ್ಟು ಪಿಂಚಣಿ ಬರುತ್ತಿತ್ತು. ಸ್ಯಾಂಡರ್ಸ್‌ಗೆ ಆ ದಿನದಲ್ಲಿ ಮಾಸಿಕ ಕೇವಲ 100 ಡಾಲರ್ ಸೋಷಿಯಲ್ ಸೆಕ್ಯುರಿಟಿಯಿಂದ ಸಿಗುತ್ತಿತ್ತು. ಅದರಲ್ಲಿ ಜೀವನ ನಡೆಸಲು ಸಾಧ್ಯವಿರಲಿಲ್ಲ, ಹೀಗಾಗಿ ರೆಸ್ಟೋರೆಂಟ್ ಅನ್ನು ನಷ್ಟದಲ್ಲಿ ಮಾರಿ ಕೆಲವೊಂದು ಕಿಚನ್ ಎಕ್ವಿಪ್ ಮೆಂಟ್ ತೆಗೆದುಕೊಂಡು ಅಲೆಮಾರಿಯಂತೆ ಹೊರಡುತ್ತಾರೆ.

ಕಾರಿನ ಮಲಗುವುದು, ಅ ಜೀವನ. ಬೇರೆ ಬೇರೆ ರೆಸ್ಟೋರೆಂಟ್‌ಗಳಿಗೆ ಹೋಗಿ ಫ್ರೈಡ್ ಚಿಕನ್ ಮಾಡಿ ಕೊಡುವುದು ಮಾಡುತ್ತಾರೆ. ಕೊನೆಗೆ 1952ರಲ್ಲಿ ಇದರ ಮೊದಲ ಔಟ್‌ಲೆಟ್ ಆರಂಭವಾಗುತ್ತದೆ. ನಿಧಾನವಾಗಿ ಅದು ಪ್ರಸಿದ್ದಿ ಹೊಂದುತ್ತ ಹೋಗುತ್ತದೆ. ಜನ ದೂರದ ಊರುಗಳಿಂದ ಇವರನ್ನು ಮಾತನಾಡಿಸಲು ಬರುತ್ತಾರೆ.

1960ರ ವೇಳೆಗೆ 200 ಮಳಿಗೆಗಳನ್ನು ಹೊಂದುತ್ತಾರೆ. ಇವೆಲ್ಲವೂ ಆರ್ಗ್ಯಾನಿಕ್ ಗ್ರೋಥ್. ಯಾವುದಕ್ಕೂ ಅವರು ಹಣ ಖರ್ಚು ಮಾಡಿರುವುದಿಲ್ಲ, ಮುಂದಿನ ಮೂರು ವರ್ಷದಲ್ಲಿ ಮಳಿಗೆಗಳ ಸಂಖ್ಯೆ 600 ಮುಟ್ಟುತ್ತದೆ. ಸ್ಯಾಂಡರ್ಸ್ ವಾರ್ಷಿಕ 3 ಲಕ್ಷ ಡಾಲರ್‌ಗೂ ಮಿಗಿಲಾದ ಲಾಭವನ್ನು ಪಡೆಯುತ್ತಿರುತ್ತಾರೆ.

1964ರಲ್ಲಿ ಇದನ್ನು 2 ಮಿಲಿಯನ್ ಡಾಲರ್‌ಗೆ ಮಾರುತ್ತಾರೆ. ಆದರೆ ಈ ವ್ಯಾಪಾರದ ಮುಖವಾಗಿ ಉಳಿದುಕೊಳ್ಳುತ್ತಾರೆ. 1971ರಲ್ಲಿ ಇದು ಮರುಮಾರಾಟವಾಗುತ್ತದೆ. ಈ ಬಾರಿ 285 ಮಿಲಿಯನ್ ಡಾಲರ್‌ಗೆ ಮಾರಾಟವಾಗುತ್ತದೆ. 15 ವರ್ಷದ ನಂತರ ಪೆಪ್ಸಿಕೋ ಇದನ್ನು ಕೊಳ್ಳುತ್ತದೆ. ಇಂದಿಗೆ ಈ ಬ್ರ್ಯಾಂಡ್ ಅನ್ನು ಯುಮ್ (ಇ) ಎನ್ನುವ ಸಂಸ್ಥೆ ಮುನ್ನಡೆಸುತ್ತಿದೆ.

ಯುಮ್ ಕೆಎಫ್ಸಿ ಜತೆಗೆ ಟ್ಯಾಕೋ ಬೆಲ್ ಮತ್ತು ಫಿಜ್ಜಾ ಹಟ್‌ಗಳನ್ನೂ ಮುನ್ನಡೆಸುತ್ತಿದೆ. ಬದುಕಿನುದ್ದಕ್ಕೂ ಸಂಘರ್ಷ, ಗೆಲುವಿನ ರುಚಿ ತೋರಿಸಿ ಅದನ್ನು ಆಸ್ವಾದಿಸುವ ಮೊದಲೇ ಸೋಲು ಕೈ ಹಿಡಿಯುತ್ತಿತ್ತು. ಇಷ್ಟೆ ಸಂಘರ್ಷದ ನಡುವೆ ಕರ್ನಲ್ ಸ್ಯಾಂಡರ್ಸ್ ಅವರನ್ನು ಕಾಪಾಡಿದ್ದು ಕ್ವಿಟ್ ಹೇಳದೆ ಇರುವ ಅವರ ಗುಣ. ಅವರ ವಯಸ್ಸಿನ 99 ಪ್ರತಿಶತ ಜನ ಸಾಕಪ್ಪಾ ಈ ಬದುಕು-ಬವಣೆ.


ಇನ್ನು ಮುಂದೆ ನಿವೃತ್ತಿ ಜೀವನ ಎಂದು ಕೈ ಚೆಲ್ಲಿ ಕೂರುವ ಸಮಯದಲ್ಲಿ ಹೊಸ ವೆಂಚರ್‌ಗೆ ಕೈ ಹಾಕುವುದು ಸುಲಭದ ಮಾತಲ್ಲ, 1980ರಲ್ಲಿ ರಕ್ತದ ಕ್ಯಾನ್ಸರ್‌ಗೆ ತುತ್ತಾಗಿ ಡಿಸೆಂಬರ್ 16ರಂದು ಇಲ್ಲಿನ ಎಲ್ಲಾ ಸಂಘರ್ಷಗಳಿಗೆ, ಸೋಲಿಗೆ, ಗೆಲುವಿಗೆ ಗುಡ್ ಬೈ ಹೇಳಿ ಹೊರಡುತ್ತಾರೆ. 90 ವರ್ಷದ ಅವರ ಜೀವನ ಕಥೆ ಸಾಮಾನ್ಯದಲ್ಲಿ ಸಾಮಾನ್ಯವಾಗಿ ಯಾರಿಗೂ ತಿಳಿಯದೆ ಹೋಗಿ ಬಿಡುತ್ತಿತ್ತು. ಅವರಲ್ಲಿ ನಿವೃತ್ತಿಯ ವಯಸ್ಸಿನಲ್ಲೂ ಇದ್ದ ಛಲ ಅವರನ್ನು ವಿಶ್ವದೆಡೆ ಮನೆಮಾತಾಗಿಸಿತು.

**- ರಂಗಸ್ವಾಮಿ** ಎಂ

## 03-12-2025 ದಿನ ಭವಿಷ್ಯ


**ಮೇಷ:** ನಿಮ್ಮ ಕಾಯಿಲೆ ಅತೃಪ್ತಿಯ ಕಾರಣವಾಗಿರಬಹುದು. ಕುಟುಂಬದಲ್ಲಿ ಸಂತೋಷವನ್ನು ಪುನಃಸ್ಥಾಪಿಸಲು ನೀವು ಸಾಧ್ಯವಾದಷ್ಟು ಬೇಗ ಇದರಿಂದ ಹೊರಬರುವ ಅಗತ್ಯವಿದೆ. ಹಿಂದಿನ ಬಂಡವಾಳದಿಂದ ಆದಾಯವನ್ನು ನಿರೀಕ್ಷಿಸಿದ್ದಲ್ಲಿ. ಆಂತರಿಕ ಗುಣಗಳು ನಿಮಗೆ ತೃಪ್ತಿ ತರುತ್ತವೆ-ಸಕಾರಾತ್ಮಕ ದೃಷ್ಟಿಕೋನ ಬಯಸಿದ ಯಶಸ್ಸು ನೀಡುತ್ತದೆ.


**ವೃಷಭ:** ನೀವು ಇಂದು ಆರಾಮವಾಗಿ ವಿಶ್ರಾಂತಿ ಪಡೆಯಬೇಕು ನೀವು ಆನಂದಿಸುವ ಮತ್ತು ಆಸಕ್ತಿಗಳು ಮತ್ತು ವಿಷಯಗಳಲ್ಲಿ ತೊಡಗಿಕೊಳ್ಳಿ. ನಿಮ್ಮ ತಂದೆಯ ಯಾವುದೇ ಸಲಹೆ ಇಂದು ಕೆಲಸದ ಸ್ಥಳದಲ್ಲಿ ಇಂದು ನಿಮಗೆ ಹಣದ ಪ್ರಯೋಜನವನ್ನು ನೀಡುತ್ತದೆ. ನಿಮ್ಮ ಪತ್ನಿಯ ಸಾಧನೆಯನ್ನು ಶ್ಲಾಘಿಸಿ ಮತ್ತು ಅವರ ಯಶಸ್ಸು ಮತ್ತು ಉತ್ತಮ ಭವಿಷ್ಯವನ್ನು ಆನಂದಿಸಿ.



**ಮಿಥುನ:** ಜನರಲ್ಲಿ ಬೆರೆಯುವ ಭಯ ನಿಮ್ಮನ್ನು ಧೈರ್ಯಗೆಡಿಸಬಹುದು. ಇದನ್ನು ತೆಗೆದುಹಾಕಲು ನಿಮ್ಮ ಸ್ವಾಭಿಮಾನವನ್ನು ಪ್ರೋತ್ಸಾಹಿಸಿ. ನಕ್ಷತ್ರಪುಂಜಗಳ ಚಾಲನೆ ನಿಮಗಾಗಿ ಉತ್ತಮವಾಗಿಲ್ಲ. ಇಂದಿನ ದಿನ ನೀವು ನಿಮ್ಮ ಹಣವನ್ನು ತುಂಬಾ ಸುರಕ್ಷಿತವಾಗಿಡಬೇಕು. ಇತರರಿಗೆ ಪ್ರತಿಫಲಗಳು ತರುವ ನಿಮ್ಮ ಸಾಮರ್ಥ್ಯ ಪ್ರತಿಫಲ ತರುತ್ತದೆ.


**ಕರ್ಕಾಟಕ:** ನೀವು ಪ್ರಯಾಣಿಸಲು ತುಂಬಾ ದುರ್ಬಲರಾಗಿದ್ದರಿಂದ ದೀರ್ಘ ಪ್ರಯಾಣವನ್ನು ತಪ್ಪಿಸಲು ಪ್ರಯತ್ನಿಸಿ. ಆರ್ಥಿಕವಾಗಿ ಇಂದು ನೀವು ಸಾಕಷ್ಟು ಬಲವಾಗಿ ಕಾಣುವಿರಿ, ಗ್ರಹ ಮತ್ತು ನಕ್ಷತ್ರಗಳ ಚಲನೆಯಿಂದ ಇಂದು ನಿಮಗಾಗಿ ಹಣವನ್ನು ಸಂಪಾದಿಸುವ ಅನೇಕ ಅವಕಾಶಗಳು ಉಂಟಾಗುತ್ತವೆ. ಯುವಕರು ಶಾಲಾ ಯೋಜನೆಗಳಲ್ಲಿ ಕೆಲವು ಸಲಹೆ ಪಡೆಯಬಹುದು.


**ಸಿಂಹ:** ಆರೋಗ್ಯ ಚೆನ್ನಾಗಿರುತ್ತದೆ. ಭೂಮಿಯನ್ನು ಖರೀದಿಸಿದ ಮತ್ತು ಈಗ ಅದನ್ನು ಮಾರಾಟ ಮಾಡಲು ಬಯಸುವ ಜನರು ಇಂದು ಉತ್ತಮ ಖರೀದಿದಾರರನ್ನು ಕಾಣಬಹುದು ಮತ್ತು ಭೂಮಿಯನ್ನು ಮಾರಾಟ ಮಾಡುವ ಮೂಲಕ ಅವರು ಉತ್ತಮ ಹಣವನ್ನು ಪಡೆಯಬಹುದು. ಸಾಮಾಜಿಕ ಕೂಟಗಳಲ್ಲಿ ನಿಮ್ಮ ಹಾಸ್ಯದ ಪ್ರಕೃತಿ ನಿಮ್ಮನ್ನು ಜನಪ್ರಿಯಗೊಳಿಸುತ್ತದೆ.


**ಕನ್ಯಾ:** ಅತಿಯಾಗಿ ತಿನ್ನುವುದನ್ನು ತಪ್ಪಿಸಿ ಮತ್ತು ನಿಮ್ಮ ತೂಕದ ಮೇಲೆ ಹಿಡಿತ ಹೊಂದಿರಿ. ನಿಮ್ಮ ಹಣವನ್ನು ಸಂಗ್ರಹಿಸಿದಾಗ ಮಾತ್ರ ಹಣ ನಿಮ್ಮ ಕೆಲಸಕ್ಕೆ ಬರುತ್ತದೆ. ಇದನ್ನು ನೀವು ಚೆನ್ನಾಗಿ ಅರ್ಥಮಾಡಿಕೊಳ್ಳಿ ಇಲ್ಲದಿದ್ದರೆ ನೀವು ಮುಂಬರುವ ಸಮಯದಲ್ಲಿ ವಿಷಾದಿಸಬೇಕಾಗುತ್ತದೆ. ವೃತ್ತಿ ಯೋಜನೆ ಆಟಗಳಷ್ಟೇ ಮುಖ್ಯ.


**ತುಲಾ:** ದೈಹಿಕ ಲಾಭಕ್ಕಾಗಿ ವಿಶೇಷವಾಗಿ ಮಾನಸಿಕ ದೃಢತೆಗಾಗಿ ಧ್ಯಾನ ಮತ್ತು ಯೋಗ ಪ್ರಾರಂಭಿಸಿ. ಇಂದು ಹಣದ ನಷ್ಟವು ಸಂಭವಿಸಬಹುದು. ಆದ್ದರಿಂದ ವಹಿವಾಟುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ನೀವು ಎಷ್ಟು ಜಾಗರೂಕರಾಗಿರುತ್ತಿರೋ ಅಷ್ಟೇ ನಿಮಗೆ ಉತ್ತಮವಾಗಿರುತ್ತದೆ.


**ವೃಶ್ಚಿಕ:** ಪ್ರತಿ ವ್ಯಕ್ತಿಯನ್ನೂ ಆಲಿಸಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ದೊರಕಬಹುದು. ಇಂದು ನಿಮ್ಮ ತಂದೆ ತಾಯಿಯರಲ್ಲಿ ಯಾರಾದರೂ ಒಬ್ಬರು ಹಣವನ್ನು ಸಂಗ್ರಹಿಸುವ ಬಗ್ಗೆ ಉಪನ್ಯಾಸಗಳನ್ನು ನೀಡಬಹುದು, ನೀವು ಅವರ ಮಾತುಗಳನ್ನು ಬಹಳ ಗಮನವಾಗಿ ಕೇಳಬೇಕಾದ ಅಗತ್ಯವಿದೆ. ಇಲ್ಲದಿದ್ದರೆ ಮುಂಬರುವ ಸಮಯಲ್ಲಿ ನೀವೇ ತೊಂದರೆಗೊಳಗಾಗಬಹುದು.


**ಧನು:** ಗರ್ಭಿಣಿಯರಿಗೆ ಉತ್ತಮ ದಿನವಲ್ಲ, ನೀವು ನಡೆಯುವಾಗ ಹೆಚ್ಚು ಜಾಗರೂಕರಾಗಿರಬೇಕು. ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು. ಇದರಿಂದ ಅವರಿಗೆ ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ. ಧಾರ್ಮಿಕ ಸ್ಥಳಕ್ಕೆ ಅಥವಾ ಸಂಬಂಧಿಗಳ ಭೇಟಿ ಸಾಧ್ಯವಿದೆ.


**ಮಕರ:** ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ ಮತ್ತು ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ಹೊಸ ಒಪ್ಪಂದಗಳು ಲಾಭದಾಯಕವೆಂದು ಕಂಡರೂ ಬಯಸಿದ ಲಾಭ ತರುವುದಿಲ್ಲ - ಹಣವನ್ನು ಹೂಡುವ ಪ್ರಶ್ನೆ ಬಂದಾಗ ಆತುರದ ನಿರ್ಧಾರಗಳನ್ನು ಮಾಡಬೇಡಿ. ನಿಮ್ಮ ಜ್ಞಾನ ಮತ್ತು ಒಳ್ಳೆಯ ಹಾಸ್ಯ ನಿಮ್ಮ ಬಳಿಯಿರುವ ಜನರನ್ನು ಆಕರ್ಷಿಸಬಹುದು.


**ಕುಂಭ:** ವಿಶೇಷವಾಗಿ ಬಿಕ್ಕಟ್ಟಿನ ಸಮಯದಲ್ಲಿ ನಿಮ್ಮ ತಾಳ್ಮೆ ಕಳೆದುಕೊಳ್ಳಬೇಡಿ. ಪ್ರಮುಖ ಜನರು ವಿಶೇಷ ವರ್ಗ ಹೊಂದಿರುವ ಯಾವುದಕ್ಕಾದರೂ ಹಣಕಾಸು ನೀಡಲು ಸಿದ್ಧವಾಗಿರುತ್ತಾರೆ. ಸ್ನೇಹಿತರೊಂದಿಗಿನ ಸಂಜೆ ಹೆಚ್ಚು ಮನರಂಜನೀಯವಾಗಿರುತ್ತದೆ ಮತ್ತು ಸಂತೋಷದಿಂದ ತುಂಬಿರುತ್ತದೆ. ನಿಮ್ಮ ಪ್ರಚೋದಕ ವೈವಾಹಿಕ ಜೀವನದಲ್ಲಿ ಇಂದು ಒಂದು ಸುಂದರ ಬದಲಾವಣೆಯನ್ನು ನೀವು ಅನುಭವಿಸುತ್ತೀರಿ.


**ಮೀನ:** ನೀವು ಬಹುಕಾಲದಿಂದ ಎದುರು ನೋಡುತ್ತಿದ್ದ ಜೀವನದ ಒತ್ತಡಗಳಿಂದ ಇಂದು ಶಮನ ಪಡೆಯುತ್ತೀರಿ. ಅವುಗಳನ್ನು ಶಾಶ್ವತವಾಗಿ ದೂರವಿರಿಸಲು ನಿಮ್ಮ ಜೀವನಶೈಲಿಯನ್ನು ಬದಲಿಸಲು ಇದು ಸರಿಯಾದ ಸಮಯ. ಕೆಲವು ದುಃಖದ ಸಮಯದಲ್ಲಿ ನೀವು ಸಂಗ್ರಹಿಸುವ ಹಣ ಮಾತ್ರ ನಿಮ್ಮ ಕೆಲಸಕ್ಕೆ ಬರುತ್ತದೆ ಎಂಬುದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಿ.

# ನಡೆ-ನುಡಿಗಳೊಂದಾದ ವ್ಯಕ್ತಿಯ ವ್ಯಕ್ತಿತ್ವವೇ ಚೆಂದ



ನುಡಿಯೊಳಗಾಗಿ ನಡೆಯದಿದ್ದರೆ ಕೂಡಲ ಸಂಗಮ ದೇವನೆಂತೊಲಿವನಯ್ಯಾ ಎಂಬ ಚಿರಪರಿಚಿತ ವಚನದ ಮಾತನ್ನು ನಾವೆಲ್ಲರೂ ಕೇಳಿದ್ದೇವೆ. ಇಲ್ಲಿ ಎರಡು ಪದಗಳ ಕುರಿತಾಗಿ ನನಗೆ ಚಿಂತನೆ ಮಾಡಲೇಬೇಕೆಂದೆನಿಸಿದೆ. ಒಂದು ನಡೆ, ಮತ್ತೊಂದು ನುಡಿ. ನಡೆ-ನುಡಿ ಒಂದಾದರೆ ನಮ್ಮ ವ್ಯಕ್ತಿತ್ವವೇ ಚಂದವಲ್ಲವೇ? ಮನುಷ್ಯನ ನಿಜವಾದ ಮೌಲ್ಯವನ್ನು ಅಳೆಯುವುದಾದರೆ ಅದು ಅವನ ಬಾಯಿಯಲ್ಲಿ ಕೇಳುವ ಶೃಂಗಾರವಾದ ಮಾತಿನಲ್ಲಿ ಅಲ್ಲ; ಬದಲಾಗಿ ಅವನು ಹೇಳುವುದನ್ನೇ ನಡೆಗಳಲ್ಲಿ ಅನ್ವಯಿಸುತ್ತಾನೆಯೇ ಎಂಬುದರಲ್ಲಿ ಅಡಗಿದೆ. ಮಾತು ಒಂದು, ನಡೆ ಮತ್ತೊಂದು ಇದ್ದರೆ ವಿಶ್ವಾಸ ಕಳೆದುಹೋಗುತ್ತದೆ. ಆದರೆ ನಡೆನುಡಿ ಒಂದಾಗಿದ್ದು, ಸತ್ಯತೆನಿಷ್ಠೆಗಳೊಂದಿಗೆ ಬೆಳಗಿದಾಗ ವ್ಯಕ್ತಿಯ ಒಳಗಿನ ಅಂತರಂಗ ಸೌಂದರ್ಯ ಹೊರಹೊಮ್ಮುತ್ತದೆ. ನಿಜವಾದ ವ್ಯಕ್ತಿತ್ವವೆಂದರೆ ತನ್ನ ಮಾತು, ನಡೆ, ಮನೋಭಾವ ಎಲ್ಲವು ಪರಸ್ಪರ ಹೊಂದಿಕೊಳ್ಳುವ ಗುಣ.

ವ್ಯಕ್ತಿಯ ನುಡಿ ಎಂದರೆ ಅವನ ಆಶಯ, ಆದರ್ಶ, ಸದ್ದಿಲ್ಲದ ಘೋಷಣೆ. ನಡೆ ಎಂದರೆ ಆ ಮಾತುಗಳಿಗೆ ಜೀವ ತುಂಬುವ ಕ್ರಿಯಾತ್ಮಕ ಬಲ. ಈ ಎರಡೂ ಒಂದಾದಾಗ ಮಾತ್ರ ವ್ಯಕ್ತಿಯಲ್ಲಿ ವಿಶ್ವಾಸಾರ್ಹತೆ ಹುಟ್ಟುತ್ತದೆ. ಇತರರ ಹೃದಯದಲ್ಲಿ ಅವನಿಗೆ ಗೌರವ ನಿರ್ಮಾಣವಾಗುತ್ತದೆ. ವ್ಯಕ್ತಿತ್ವವನ್ನು ರೂಪಿಸುವಲ್ಲಿ ಜ್ಞಾನ, ಬುದ್ಧಿ, ಶಿಕ್ಷಣ ಮುಖ್ಯವಾದರೂ ನಡೆನುಡಿಯ ಏಕತೆ ಅತ್ಯಂತ ಮೂಲಭೂತವಾಗಿ ಇರಬೇಕು. ವ್ಯಕ್ತಿಯ ನುಡಿ ಎಂದರೆ ಅವನ ಆಶಯ, ಆದರ್ಶ, ಸದ್ದಿಲ್ಲದ ಘೋಷಣೆ. ನಡೆ ಎಂದರೆ ಆ ಮಾತುಗಳಿಗೆ ಜೀವ ತುಂಬುವ ಕ್ರಿಯಾತ್ಮಕ ಬಲ. ಈ ಎರಡೂ ಒಂದಾದಾಗ ಮಾತ್ರ ವ್ಯಕ್ತಿಯಲ್ಲಿ ವಿಶ್ವಾಸಾರ್ಹತೆ ಹುಟ್ಟುತ್ತದೆ; ಇತರರ ಹೃದಯದಲ್ಲಿ ಅವನಿಗೆ ಗೌರವ ನಿರ್ಮಾಣವಾಗುತ್ತದೆ. ವ್ಯಕ್ತಿತ್ವವನ್ನು ರೂಪಿಸುವಲ್ಲಿ ಜ್ಞಾನ, ಬುದ್ಧಿ, ಶಿಕ್ಷಣ ಮುಖ್ಯವಾದರೂ ನಡೆನುಡಿಯ ಏಕತೆ ಅತ್ಯಂತ ಮೂಲಭೂತ. ಇದಕ್ಕೆ ಉದಾಹರಣೆಯಾಗಿ ಒಂದು ನೀತಿಕಥೆ ಹೇಳುವುದು ಸೂಕ್ತವೆನಿಸುತ್ತದೆ.

ಒಂದೂರಲ್ಲಿ ಆಕಾಶಯ್ಯ ಎಂಬ ಒಬ್ಬ ಕಾರ್ಪೆಂಟರ್ ಇದ್ದ. ಅವನು ತುಂಬಾ ಮಧುರವಾಗಿ ಮಾತನಾಡುತ್ತಿದ್ದ. ಯಾರನ್ನೇ ಭೇಟಿಯಾದರೂ ನಾನು ನಿಮಗೆ ಉತ್ತಮ ಕೆಲಸ ಮಾಡಿಕೊಡುತ್ತೇನೆ, ನಾಳೆಯೇ ಮುಗಿಸುತ್ತೇನೆ ಎಂದು ಭರವಸೆ ನೀಡುತ್ತಿದ್ದ. ಆದರೆ ಅವನ ನಡೆ ಮಾತಿಗೆ ವಿರುದ್ಧವಾಗಿತ್ತು. ಕೆಲಸವನ್ನು ವಿಳಂಬ ಮಾಡುವುದು, ಕಳಪೆ ಗುಣಮಟ್ಟದ ತಯಾರಿಕೆ ಮಾಡುತ್ತಿದ್ದ. ಒಮ್ಮೆ ಮಾಡಿದ್ದನ್ನು ಮತ್ತೆ ತಿದ್ದಿಸುವ ಪರಿಸ್ಥಿತಿ ಪದೇಪದೇ ಉಂಟಾಗುತ್ತಿತ್ತು. ಹಳ್ಳಿಯ ಜನರು ಮೊದಲಿಗೆ ಅವನ ಮಾತಿಗೆ ಮರುಳಾಗಿದ್ದರು. ಆದರೆ ಕಾಲ ಕಳೆದಂತೆ ಅವನ ಮಾತು ಮತ್ತು ಕೆಲಸದಲ್ಲಿ ಹೊಂದಾಣಿಕೆ ಇಲ್ಲದೆ ಇರುವುದನ್ನು ಗಮನಿಸಿದರು. ಹಾಗಾಗಿ ಜನರು ಅವನ ಮೇಲೆ ನಂಬಿಕೆಯನ್ನು ಕಳೆದುಕೊಂಡರು. ಅದೇ ಹಳ್ಳಿಯಲ್ಲಿ ಶಿವಯ್ಯ ಎಂಬ ಮತ್ತೊಬ್ಬ ಕಾರ್ಪೆಂಟರ್ ಇದ್ದ. ಅವನು ಹೆಚ್ಚು ಮಾತನಾಡುವುದಿಲ್ಲ. ಮಾಡುವೆನು ಎಂದರೆ ನಿಜಕ್ಕೂ ಮಾಡುತ್ತಿದ್ದ. ಇಂತಹ ದಿನ ಎಂದು ಹೇಳಿದರೆ ಅಂತಹುದೇ ದಿನ ಕೆಲಸ ಮುಗಿಸುತ್ತಿದ್ದನು. ಗುಣಮಟ್ಟ ಎಂದರೆ ಗುಣಮಟ್ಟ. ಹೇಗೆ ಬೇಕೋ ಹಾಗೆ ಮಾತನಾಡುತ್ತಿರಲಿಲ್ಲ, ಆದರೆ ಮಾಡಿದ ಕೆಲಸವು ಆತನ ಶ್ರಮ ಮತ್ತು ನಿಷ್ಠೆಯು, ಆತನ ನಡೆನುಡಿಗೆ ಹೊಂದುವಂತೆ ಸಾಕ್ಷಿಯಾಗಿತ್ತು. ಕಾಲ ಕಳೆದಂತೆ ಆಕಾಶಯ್ಯನ ಬಳಿಗೆ ಜನರು ಹೋಗುವುದೇ ಕಡಿಮೆ ಆಯಿತು. ಆದರೆ ಶಿವಯ್ಯನ ಮನೆ ಮುಂದೆ ಕೆಲಸದ ಕಾಯ್ದಿರಿಸುವ ಸಾಲುಗಟ್ಟುತ್ತಿತ್ತು. ಹಳ್ಳಿಯ ಮಕ್ಕಳು ಕೂಡ ಶಿವಯ್ಯನಂತೆ ಆಗಬೇಕು. ಮಾತು ಕಡಿಮೆ, ಕೆಲಸ ಹೆಚ್ಚು ಎಂದು ಹೇಳಿಕೊಳ್ಳಲು ಪ್ರಾರಂಭಿಸಿದರು. ಈ ಕಥೆ ನಮಗೆ ಹೇಳುವುದು ಒಂದು ಸ್ಪಷ್ಟ ಸತ್ಯ: ಅದೇನೆಂದರೆ ಮಾತು ಸುಂದರವಾಗಿರ ಬಹುದು, ಆದರೆ ನಡೆ ಸುಂದರವಾಗಿದ್ದರೆ ಮಾತ್ರ ವ್ಯಕ್ತಿತ್ವವು ನಿಜವಾದ ಮೌಲ್ಯ ಪಡೆಯುತ್ತದೆ. ಮಾತಿಗೆ ಬಲ ಕೊಡುವುದು ನಡೆ; ನಡೆನುಡಿ ಒಂದಾದಾಗ ಮಾತ್ರ ವ್ಯಕ್ತಿಯು ವಿಶ್ವಾಸಾರ್ಹ, ಗೌರವಾನ್ವಿತ, ಆದರ್ಶಪ್ರಾಯನಾಗುತ್ತಾನೆ.

ಹಳ್ಳಿಯಲ್ಲಿ ನಿಧಾನವಾಗಿ ಕೆಲಸ ಕಳೆದುಕೊಂಡ ಆಕಾಶಯ್ಯ ಮನಸ್ಸಿನಲ್ಲಿ ತೀವ್ರ ನೋವು ಹುಟ್ಟಿತು.

ಒಂದು ದಿನ ಅವನು ಶಿವಯ್ಯನ ಕೆಲಸವನ್ನು ನಿಜವಾಗಿ ಗಮನಿಸುವ ನಿರ್ಧಾರ ಮಾಡಿದ. ಬೆಳಗ್ಗಿನಿಂದ ಸಂಜೆವರೆಗೂ ಅವನ ಜೊತೆ ಕಾಲ ಕಳೆದ. ಶಿವಯ್ಯ ಹೆಚ್ಚು ಮಾತನಾಡಲಿಲ್ಲ; ಆದರೆ ಮಾಡಿದ ಕೆಲಸವೇ ಅವನ ಮಾತಿನಂತೆ ಸ್ಪಷ್ಟವಾಗಿತ್ತು. ಆ ದಿನ ಆಕಾಶಯ್ಯನ ಮನಸ್ಸಿಗೆ ಒಂದು ತಿಳಿವಳಿಕೆ ನೀಡಿತು. ಒಳ್ಳೆಯ ಮಾತು ಜನರನ್ನು ಒಮ್ಮೆ ಮೋಹಿಸಬಹುದು, ಆದರೆ ಒಳ್ಳೆಯ ನಡೆ ಜನರನ್ನು ಬದುಕಿನವರೆಗೂ ನಂಬಿಸುವುದು. ಆ ನಂತರ ಆಕಾಶಯ್ಯ ತನ್ನ ಮಾತುಗಳಿಗೆ ಹೊಣೆ ಹೊತ್ತು ಬದುಕಲು ಆರಂಭಿಸಿದ. ನಾಳೆ ಎಂದು ಹೇಳಿದರೆ ನಾಳೆ ಕೆಲಸ ಮುಗಿಸುತ್ತಿದ್ದ. ಉತ್ತಮ ಕೆಲಸ ಎಂದರೆ ನಿಜಕ್ಕೂ ಉತ್ತಮ ಗುಣಮಟ್ಟದ ಕೆಲಸ ಮಾಡಿಕೊಡುತ್ತಿದ್ದ. ನಿಧಾನವಾಗಿ ಜನರು ಅವನ ಕಡೆ ಮತ್ತೆ ತಿರುಗತೊಡಗಿದರು. ಹಳ್ಳಿಯ ಹಿರಿಯರು ಆಕಾಶಯ್ಯನನ್ನು ನೋಡಿ ಹೇಳಿದರು: ತಪ್ಪನ್ನು ಒಪ್ಪಿಕೊಂಡು ನಡೆ ಸರಿಪಡಿಸಿದವನೇ ನಿಜವಾದ ಮಹಾನ್. ಇದರಿಂದ ಆಕಾಶಯ್ಯ ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡವರಿಂದ, ಮತ್ತೆ ಗೌರವ ತಂದುಕೊಂಡ ವ್ಯಕ್ತಿಯನ್ನಾಗಿ ರೂಪಿಸಿಕೊಂಡ. ಇದರ ಮೂಲ ಸಂದೇಶವನ್ನು ಗಾಢವಾಗಿ ನೋಡುವುದಾದರೆ, ಮಾತು ಅಂದರೆ ವಚನ; ನಡೆ ಅಂದರೆ ಪಾಲನೆ. ವಚನ ಕೊಡುವುದು ಸುಲಭ; ಅದನ್ನು ಪಾಲಿಸುವುದು ಕಷ್ಟ. ಪಾಲನೆ ಮಾಡಿದಾಗಲೇ ವ್ಯಕ್ತಿ ವಿಶ್ವಾಸಾರ್ಹ. ನಡೆಯಿಂದ ವ್ಯಕ್ತಿತ್ವ ಕಟ್ಟುತ್ತದೆ. ನುಡಿ ಕಿವಿಗೆ ತಾಗುತ್ತದೆ; ನಡೆ ಹೃದಯಕ್ಕೆ ತಾಗುತ್ತದೆ. ನಡೆನುಡಿ ಒಂದಾಗಿರುವ ವ್ಯಕ್ತಿಗಳು ಸಮಾಜದ ಅಡಿಗಲ್ಲು ಹಾಗೂ ಆದರ್ಶಪ್ರಾಯರು. ಅವರ ಮಾತುಗಳು ಕೇವಲ ಶಬ್ದವಲ್ಲ; ಅವು ಬದುಕಿನ ದಾರಿದೀಪವಾಗಿವೆ. ವ್ಯಕ್ತಿತ್ವವೆಂದರೆ ಬರೀ ವೇಷವಲ್ಲ; ಅದು ಅಂತರಂಗದ ನಿಷ್ಠೆ. ನಿಷ್ಠೆಯಿಂದ ಮಾತನಾಡಿ, ನಿಷ್ಠೆಯಿಂದ ಕೆಲಸ ಮಾಡುತ್ತಿದ್ದರೆ ಆತ್ಮಗೌರವ ಕೂಡ ಬೆಳೆದುಕೊಳ್ಳುತ್ತದೆ. ನಡೆ ನುಡಿ ಒಂದಾಗಿರುವವರು ಸಮಾಜಕ್ಕೆ ಒಂದು ಸಂದೇಶವನ್ನು ನೀಡುವವರಾಗುತ್ತಾರೆ. ಇಂದಿನ ಜಗತ್ತಿನಲ್ಲಿ ಮಾತುಗಳು ಹೆಚ್ಚಾಗಿವೆ, ಆದರೆ ನಡೆಗಳಲ್ಲಿ ಕೊರತೆ ಕಂಡುಬರುತ್ತಿದೆ. ಹೀಗಿರುವಾಗ ನಡೆನುಡಿಯಲ್ಲಿ ಏಕತೆ ಹೊಂದಿರುವ ವ್ಯಕ್ತಿಗಳು ಸಮಾಜಕ್ಕೆ ದಿಕ್ಸೂಚಿಯಂತೆ ಇರುತ್ತಾರೆ. ಇದರ ಒಟ್ಟಾರೆ ಸಾರಾಂಶವನ್ನು ಹೇಳುವುದಾದರೆ ನಡೆನುಡಿ ಒಂದಾಗಿದ್ದಾಗ ಮಾತ್ರ ಮನುಷ್ಯನಿಗೆ ವ್ಯಕ್ತಿತ್ವ ಎಂಬ ಬಂಗಾರದ ಕಿರೀಟ ಸಿಗುತ್ತದೆ. ಅವನ ಮಾತಿನ ಮಧುರತೆ ಕಿವಿಗೆ ಆನಂದ ನೀಡಬಹುದು; ಆದರೆ ಅವನ ನಡೆ ನೀಡುವ ನೈತಿಕತೆಯು ಮನಸ್ಸಿಗೆ ಸತ್ಯದ, ನಂಬಿಕೆಗಳ, ಮೌಲ್ಯಗಳ ಬೆಳಕು ನೀಡುತ್ತದೆ. ಮಕ್ಕಳು, ವಿದ್ಯಾರ್ಥಿಗಳು ಮತ್ತು ಯುವಕರು ಎಲ್ಲರೂ ಇಂತಹ ನಡೆನುಡಿ ಒಂದಾಗಿರುವವರನ್ನು ರೋಲ್ ಮಾಡೆಲ್ ಆಗಿ ಆರಿಸಿಕೊಂಡಾಗ ಮಾತ್ರ ಸುಧಾರಿತ ಸಮಾಜವನ್ನು ಕಾಣಲು ಸಾಧ್ಯವಾದೀತು. ಉತ್ತಮ ಸಮಾಜದ ನಿರ್ಮಾಣಕ್ಕೆ ನಡೆನುಡಿಯಲ್ಲಿ ಒಂದಾದ ವ್ಯಕ್ತಿತ್ವಗಳೇ ಚಂದ. ನುಡಿದಂತೆ ನಡೆಯುವ ಪರಿಪಾಠವನ್ನು ನಾವೂ ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಪಾಲಿಸೋಣ.

**- ಕೆ. ಎನ್. ಚಿದಾನಂದ.** ಹಾಸನ

## ಹಲಸಿನ ಹಣ್ಣು ಆರೋಗ್ಯಕ್ಕೆ ಉತ್ತಮ

ಹಲಸಿನ ಹಣ್ಣು ಆರೋಗ್ಯಕ್ಕೆ ಉತ್ತಮ. ಹಿಂದೆ ಮಳೆಗಾಲದಲ್ಲಿ (ಆಷಾಢ) ಜನ ಹಲಸಿನ ಕಾಯಿ, ಹಲಸಿನ ಹಣ್ಣು, ಹಲಸಿನ ಬೀಜ ತಿನ್ನುತ್ತಿದ್ದರು. ಆಗ ಆಷಾಢ ಎಂದರೆ ಕಷ್ಟದ ದಿನಗಳು. ಒಂದು ಹೊತ್ತಿನ ಊಟ ಸ್ವಲ್ಪ ಕಡಿಮೆಯಾದರೂ ಅಷ್ಟಾದರೂ ಉಳಿಯಿತಲ್ಲಾ ಎನ್ನುವ ಭಾವನೆ. ಅದಕ್ಕೆ ಪೂರಕ ಆಹಾರವಾಗಿ ಹಲಸನ್ನು ಬಳಸುತ್ತಿದ್ದರು.

ಹಲಸಿನ ಹಣ್ಣು ತಿಂದರೆ ಒಂದು ಹೊತ್ತಿನ ಊಟ ಬಿಟ್ಟರೂ ತೊಂದರೆಯಾಗದು. ಮರಗಳಲ್ಲಿ ಬೆಳೆಯುವ ಅತೀ ದೊಡ್ಡ ಹಣ್ಣು ಎಂದರೆ ಹಲಸು ಮಾತ್ರ. ಇದು ಮನುಷ್ಯ, ಪ್ರಾಣಿ, ಪಕ್ಷಿ ಎಲ್ಲರಿಗೂ ಆಹಾರ. ಇದನ್ನರಿತೇ ನಮ್ಮ ಪೂರ್ವಿಕರು ಹಲಸಿನ ಸಸಿ ನೆಟ್ಟು ಬೆಳೆಸಿ ಹಲಸಿನ ಕಾಯಿ ಪಡೆಯುತ್ತಿದ್ದರು.

ದಿನದಲ್ಲಿ 10-12 ಹಲಸಿನ ಸೊಳೆ ತಿಂದರೆ ಅರ್ಧ ದಿನದ ಊಟ ತಿಂದಷ್ಟು ಶರೀರಕ್ಕೆ ಶಕ್ತಿಯನ್ನು ಅದು ಕೊಡುತ್ತದೆ. ತಿನ್ನುವಾಗ ಮಾತ್ರ ಹಲಸಿನ ಸೊಳೆಯನ್ನು ಸಣ್ಣಕ್ಕೆ ಜಗಿದು ತಿಂದರೆ (ಕನಿಷ್ಠ 30 ಬಾರಿ) ಮಾತ್ರ ಅದರ ಫಲಿತಾಂಶ ದೊರೆಯುತ್ತದೆ. ಇಲ್ಲವಾದರೆ ಅದು ಹಾಗೆಯೇ ಹೊರ ಹೋಗುತ್ತದೆ. ಇದನ್ನು ಜಗಿಯುವುದರಿಂದ ಹಲ್ಲಿಗೆ ವ್ಯಾಯಾಮ ದೊರೆಯುತ್ತದೆ. ಈ ಹಣ್ಣಿನಲ್ಲಿ ನೈಸರ್ಗಿಕ ನಾರು, ಪ್ರೊಟೀನು, ಕ್ಯಾಲ್ಸಿಯಂ, ಕಬ್ಬಿಣಾಂಶ ಮತ್ತು ಇನ್ನಿತರ ಪೋಷಕಾಂಶಗಳು ಇವೆ. 100 ಕ್ಯಾಲೊರಿಗಳಲ್ಲಿ 95 ಕ್ಯಾಲೊರಿ ಸತ್ವ ಇರುವ ಹಣ್ಣು ಇದು. ಇದನ್ನು ಬೇಯಿಸಿ, ಮತ್ತು ಹಸಿಯಾಗಿ ತಿನ್ನಬಹುದು. ಬೇಯಿಸಿ ವಿವಿಧ ಅಡುಗೆ ಮಾಡಬಹುದು. ಹಪ್ಪಳ, ಪಲ್ಯ, ಸಾಂಬಾರು ಮಾಡಿ ಬಳಕೆ ಮಾಡಬಹುದು. ಹಲಸಿನ ಬೀಜವನ್ನು ಬೇರೆ ಬೇರೆ ರೀತಿ ಅಡುಗೆ ಮಾಡಬಹುದು. ಅದನ್ನು 2-3 ತಿಂಗಳು ದಾಸ್ತಾನು ಇಟ್ಟು ಬಳಸಬಹುದು. ಹಲಸಿನ ಬೀಜ ವಾಯು ಎನ್ನುತ್ತಾರೆ. ವಾಯು ಎಂದರೆ ಅದರಲ್ಲಿ ಅಧಿಕ ಪ್ರಮಾಣದಲ್ಲಿ ಕಾರ್ಬೋಹೈಡ್ರೇಟುಗಳಿವೆ ಎಂದರ್ಥ. ಇದನ್ನು ಹಿತಮಿತವಾಗಿ ಸೇವಿಸಿದರೆ ಅಂಥಃ ಸಮಸ್ಯೆ ಇಲ್ಲ.

ಒಂದು ಕಾಲದಲ್ಲಿ ಹಲಸು ಬೆಳೆದು ಹಣ್ಣಾಗಿ ತೋಟದ ಮೂಲೆಯಲ್ಲಿ ಕೊಳೆಯುತ್ತಾ ಇರುತ್ತಿತ್ತು. ಆದರೆ ಕಾಲ ಕಳೆದಂತೆ ಹಲಸಿನ ಮರಗಳೂ ಅಪರೂಪವಾಗುತ್ತಿವೆ. ಹಲಸಿಗೂ ಬಂಗಾರದ ಬೆಲೆ ಬರುತ್ತಿದೆ. ನಗರ, ಪಟ್ಟಣಗಳಲ್ಲಿ ಹಲಸಿನ ಹಣ್ಣಿಗೆ ಕೆಜಿಗೆ ರೂ. 200.00 ಕ್ಕೂ ಅಧಿಕ ಬೆಲೆ ನೀಡಬೇಕಾಗುತ್ತದೆ.

ಅದರಲ್ಲೂ ಹಲಸಿನ ತೊಳೆಯ ಬಣ್ಣ ಕೆಂಪು, ಕೇಸರಿ ಆದರಂತೂ ಅದರ ಬೆಲೆ ಇನ್ನೂ ಹೆಚ್ಚು. ವಾಣಿಜ್ಯಕವಾಗಿ ಹಲಸು ಬೆಳೆಯಲು ಯೋಜನೆಗಳನ್ನು ಹಾಕಿಕೊಂಡರೆ ಕೃಷಿಕರು ಉತ್ತಮ ಆದಾಯ ಗಳಿಸಬಹುದಾಗಿದೆ.


## ಆದರ್ಶ ಕುಟುಂಬ

ಇಂದು ಅಪರೂಪದ ದಂಪತಿಗಳ ಕಥೆ ನೋಡೋಣ. ಗ್ರೀಕ್ ದೇಶದ ಅಥೆನ್ಸ್ ನಗರದಲ್ಲಿ ಸುಮಾರು 2500 ವರ್ಷಗಳ ಹಿಂದೆ (ಸುಖರಾತ) ಸಾಕ್ರೆಟಿಸ್ ಎನ್ನುವ ಶ್ರೇಷ್ಠ ತತ್ವಜ್ಞಾನಿ ಇದ್ದನು. ಮುಖ ಅಷ್ಟು ಸುಂದರವಾಗಿರಲಿಲ್ಲ. ಒರಟು ದೇಹ. ಕೆತ್ತನೆ ಮರಗೆಲಸ ಮಾಡಿಕೊಂಡಿದ್ದನು. ಆದರೆ ಈತನ ಮಾತು ಕೇಳಲು ಅಥೆನ್ಸ್ ನಗರದ ಯುವಕರೆಲ್ಲ ದಾವಿಸುತ್ತಿದ್ದರು. ಸಾಕ್ರೆಟಿಸ್ ಈ ಯುವಕರನ್ನು ಸಣ್ಣ ಸಣ್ಣ ಪ್ರಶ್ನೆಗಳನ್ನು ಕೇಳುವ ಮೂಲಕ ಸತ್ಯದ ಜ್ಞಾನ ಮೂಡಿಸುತ್ತಿದ್ದನು. ಸಾಕ್ರೆಟಿಸ್ ಅನುಭವಿ, ಸತ್ಯ ದರ್ಶಕ. ಆದುದರಿಂದ ಆತನ ಮಾತು ಮಧುರ ಹಾಗೂ ಸತ್ಯದಿಂದ ಕೂಡಿತ್ತು. ಆತನ ಮಾತು ಕೇಳಿದವರ ಮನಸ್ಸಿನಲ್ಲಿ ಸತ್ಯದ ಜ್ಞಾನ ಮೂಡುತಿತ್ತು. ಮನಸ್ಸು ಹಗುರ, ಮಧುರ ಹಾಗೂ ವಿಶಾಲವಾಗುತ್ತಿತ್ತು. ಸಾಕ್ರೆಟಿಸ್‌ನ ಹೆಂಡತಿ ಝಾಂತಪಿ. ಝಾಂತಪಿ ಎಂದರೆ ಜಗಳಗಂಟಿ ಎಂದರ್ಥ. ಹೆಸರಿಗೆ ತಕ್ಕಂತೆ ಝಾಂತಪಿ ಜಗಳಗಂಟಿಯಾಗಿದ್ದಳು. ಆದರೆ ಸೌಂದರ್ಯವತಿಯಾಗಿದ್ದಳು. ಸಾಕ್ರೆಟಿಸ್ ಶ್ರೇಷ್ಠ ತತ್ವಜ್ಞಾನಿಯಾದರೂ ಮನೆಗೆ ಏನು ತರುತ್ತಿರಲಿಲ್ಲ. ಊಟಕ್ಕೆ ಮಾತ್ರ ಬರುತ್ತಿದ್ದನು. ಇದರಿಂದ ಝಾಂತಪಿ ರೋಸಿ ಹೋಗಿದ್ದಳು. ಆಗಾಗ್ಗೆ ಜಗಳ ಮಾಡುತ್ತಿದ್ದಳು. ಒಮ್ಮೆ ಸಾಕ್ರೆಟಿಸ್ ಯುವಕರೊಂದಿಗೆ ಮಾತನಾಡುತ್ತಾ ಕುಳಿತಿದ್ದನು. ಆಗ ಝಾಂತಪಿ ಮನೆ ನಿರ್ವಹಣೆ ಸಂಕಟದಿಂದ ರೋಸಿ ಹೋಗಿ ಪಾತ್ರೆ ತೊಳೆದ ನೀರನ್ನು ತಂದು ಯುವಕರ ಮುಂದೆ ಕುಳಿತು ಮಾತನಾಡುತ್ತಿದ್ದಾಗ ಬೈಯುತ್ತ ಸಾಕ್ರೆಟಿಸ್ ಮೈ ಮೇಲೆ ಸುರಿದಳು. ಆಗ ಸಾಕ್ರೆಟಿಸ್ ಏನು ಮಾತನಾಡದೆ ನಕ್ಕ. ಮೈ ಕೈ ಜಾಡಿಸಿ ಮಾತು ಮುಂದುವರಿಸಿದನು. ಆಗ ಮುಂದೆ ಕುಳಿತಿದ್ದ ಅನೇಕ ಯುವಕರಲ್ಲಿ ಒಬ್ಬ ಹೇಳಿದ ಏನು ಗುರುಗಳೇ ನಮ್ಮ ಮುಂದೆ ಮುಸುರೆ ತಿಕ್ಕಿದ ನೀರನ್ನು ನಿಮ್ಮ ಮೇಲೆ ಹಾಕಿ ನಿಮ್ಮನ್ನು ಅವಮಾನಿಸಿದಳಲ್ಲ ನಿಮ್ಮ ಪತ್ನಿ, ಇದು ಸರಿಯೇ ಎಂದನು. ಆಗ ಸಾಕ್ರೆಟಿಸ್ ಹೇಳಿದನು ಇದೇ ಸತ್ಯ ಸಾಕ್ಷತ್ಕಾರದ ಮಾರ್ಗ. ನಾನು ಶ್ರೇಷ್ಠ ತತ್ವಜ್ಞಾನಿಯಾಗಲು ಆಕೆಯೇ ಕಾರಣ. ಏಕೆಂದರೆ ಪದೇ ಪದೇ ಬೈದು ಹೀಗೆ ಮಾಡಿದರಿಂದ ನಾನು ಅದರ ಕಡೆ ಲಕ್ಷ್ಯ ಕೊಡುವುದನ್ನು ಬಿಟ್ಟೆ. ನನ್ನ ಲಕ್ಷ್ಯ ಸತ್ಯ ದರ್ಶನದ ಕಡೆಗೆ ಇದೆ. ನೀನ್ಯಾಕೆ ಈ ವಿಷಯವನ್ನು ಮನಸ್ಸಿಗೆ ಹಾಕಿಕೊಂಡೆ. ಇಂತಹ ವಿಷಯ ಮನಸ್ಸು ತುಂಬಿದರೆ ಸತ್ಯದರ್ಶನ ಸಾಧ್ಯವೇ?. ಇದರಿಂದ ಯಾವುದಕ್ಕೆ ಮಹತ್ವ ಕೊಡಬೇಕೆಂಬುದನ್ನು ಕಲಿಯಿರಿ. ಯಾವುದನ್ನು ಮನಸ್ಸಿನಲ್ಲಿ ಹಾಕಿಕೊಂಡರೆ ಸತ್ಯದರ್ಶನಕ್ಕೆ ಅಡ್ಡಿಯಾಗುತ್ತದೆ ಅದನ್ನು ಮನಸ್ಸಿನಿಂದ ತೆಗೆಯಬೇಕು. ಅಂತಹ ಘಟನೆ ಕಡೆ ಲಕ್ಷ್ಯ ಕೊಡದಿದ್ದರೆ ಸತ್ಯದರ್ಶನವಾಗುತ್ತದೆ. ಈಗ ಹೇಳಿ ಆಕೆಯೇ ನನ್ನನ್ನು ತತ್ವಜ್ಞಾನಿಯನ್ನಾಗಿ ಮಾಡಿದ್ದು ಎಂದನು.

ಯೋಚಿಸಿ ಈಗಿನ ಕಾಲದಲ್ಲಿ ಯಾರಾದರೊಂದಿಗೆ ಮಾತನಾಡುತ್ತಾ ಕುಳಿತಿದ್ದಾಗ ಆತನ ಪತ್ನಿ ಬಂದು ಮುಸುರೆ ತೊಳೆದ ನೀರು ಹಾಕಿದರೆ ಏನಾಗುತ್ತಿತ್ತು ಅಂತ. ಇದರಿಂದ ದೊಡ್ಡ ಜಗಳವಾಗಿ ಕೊನೆಗೆ ವಿಚ್ಛೇದನವಾಗುತ್ತಿತ್ತು. ಬಲ್ಲವರು ಹೇಗೆ ಆಲೋಚಿಸುತ್ತಾರೆನ್ನುವುದನ್ನು ಇದರಿಂದ ತಿಳಿದುಕೊಳ್ಳಬೇಕು. ಕೊನೆಗೆ ಮನೆಗೆ ನಾನು ಏನು ತರದಿದ್ದರೂ ಆಕೆ ಮನೆ ನಿರ್ವಹಿಸುತ್ತಾಳೆ. ಆಕೆ ನನ್ನನ್ನು ಪ್ರೀತಿಸದಿದ್ದರೆ ಮನೆ ಬಿಟ್ಟು ಹೋಗುತ್ತಿದ್ದಳು. ಆಕೆ ನನ್ನನ್ನು ಅತಿಯಾಗಿ ಪ್ರೀತಿಸುತ್ತಾಳೆ. ಹಾಗೆ ನಾನು ಕೂಡ ಆಕೆಯನ್ನು ಪ್ರೀತಿಸುತ್ತೇನೆ ಎಂದನು.

ಝಾಂತಪಿ ಹೀಗೆ ಮುಸುರೆ ತೊಳೆದ ನೀರು ಹಾಕಿ ಬೈಯುತ್ತಾ ಮನೆಗೆ ಬರುವಾಗ ಮನೆಯ ಅಕ್ಕ-ಪಕ್ಕದ ಗೆಳತಿಯರು ಝಾಂತಪಿಗೆ ಹೇಳಿದರು. ಏನು ದುಡಿಯದ ಗಂಡನನ್ನು ಕಟ್ಟಿಕೊಂಡು ಏನು ಮಾಡುತ್ತಿ?. ಈಗಲಾದರೂ ಬಿಟ್ಟುಬಿಡಬಾರದೇ ಎಂದರು. ಆಗ ಝಾಂತಪಿ ಹೇಳಿದಳು ದುಡಿದು ತಂದು ಹಾಕುವ ಗಂಡ ಸಿಗಬಹುದು. ಆದರೆ ಅವಮಾನ ಸಹಿಸಿಕೊಳ್ಳುವ ಗಂಡ ಸಿಗುತ್ತಾನೇನು. ನಿಮ್ಮ ಗಂಡಂದಿರು ತಂದು ಹಾಕುತ್ತಾರೆ. ಅವರಿಗೆ ಹೀಗೆ ಮುಸುರೆ ತೊಳೆದು ನೀರು ಹಾಕಿ. ಆಗ ನಿಮ್ಮ ಗಂಡಂದಿರು ಏನು ಮಾಡುತ್ತಾರೆ ನೋಡಿ ಎಂದಳು. ನನ್ನ ಗಂಡ ಹೊರಗೆ ಬಡವ, ಒಳಗೆ ಶ್ರೀಮಂತ. ಆತನ ಅಂತರಂಗ ಎಷ್ಟು ಶ್ರೀಮಂತ ಅಂದರೆ ಆತ ಮಾತನಾಡಿದರೆ ಇಡೀ ಅಥೆನ್ಸ್ ಪಟ್ಟಣದ ಯುವಕರೇ ಸೇರುತ್ತಾರೆ. ಅಂತಹ ಶ್ರೀಮಂತ ನನ್ನ ಪತಿ. ಅದಕ್ಕೆ ನಾನು ಆತನನ್ನು ಪ್ರೀತಿಸುತ್ತಿದ್ದೇನೆ ಎಂದಳು. ಆಗ ಗೆಳತಿಯರು ಕೇಳಿದರು ಹಾಗಾದರೆ ಹೀಗೆ ಏಕೆ ಮಾಡುತ್ತೀ?. ಆಗ ಝಾಂತಪಿ ಹೇಳಿದಳು ಮನೆ ನಿರ್ವಹಣೆ ತಾಪ ತಡೆಯಲಾಗದೆ.


ಈಗಿನ ಕಾಲದಲ್ಲಿ ಸಣ್ಣಪುಟ್ಟ ತಪ್ಪುಗಳಿಗೆ ವಿಚ್ಛೇದನ ಮಾಡು ಅಂತ ಸಲಹೆ ನೀಡುವರು ಇದ್ದಾರೆ. ಅವರ ಮಾತು ಕೇಳಿ ವಿಚ್ಛೇದನ ಆಗುವ ಪ್ರಮಾಣ ಹೆಚ್ಚಾಗಿದೆ. ಆದರ್ಶ ದಂಪತಿ ಎಂದರೇನು?, ಜಗಳ ಮಾಡದೆ ಇರುವುದಲ್ಲ. ಜಗಳವಿಲ್ಲದ ಕುಟುಂಬಗಳೇ ಇಲ್ಲ. ಆದರ್ಶ ದಂಪತಿಗಳಲ್ಲೂ ಜಗಳವಾಗುತ್ತದೆ. ಆದರೆ ಅವರು ಮಾತಿಗೆ ಮಹತ್ವ ಕೊಡುವುದಿಲ್ಲ, ಬದುಕಿಗೆ ಮಹತ್ವ ಕೊಡುತ್ತಾರೆ. ಆದರೆ ಈಗಿನವರು ಬದುಕಿಗೆ ಮಹತ್ವ ನೀಡುವುದಿಲ್ಲ, ಮಾತಿಗೆ ಮಹತ್ವ ನೀಡುತ್ತಾರೆ. ಆದರ್ಶ ದಂಪತಿಗಳಲ್ಲಿ ಯಾರಿಗಾದರೂ ಕೋಪ ಬಂದರೆ ಮತ್ತೊಬ್ಬರು ಮೌನವಾಗಿದ್ದು, ಮಾತಿನ ಸರಿ ತಪ್ಪು ನೋಡದೆ ತಾಪಕ್ಕೆ ಕಾರಣ ಏನು? ಎಂದು ತಿಳಿದು ಮನಸ್ಸನ್ನು ಸಂತೈಸಿ ಕೊಳ್ಳುತ್ತಾರೆ. ಉಳಿದವರು ಕೋಪದ ಕಾರಣಕ್ಕೆ ಮಹತ್ವ ಕೊಡದೆ, ಮಾತಿಗೆ ಹೆಚ್ಚು ಮಹತ್ವ ನೀಡುವುದರಿಂದ ಮನಸ್ಸು ಸಮಾಧಾನಗೊಳ್ಳುವ ಬದಲು ಮನಸ್ತಾಪ ಉಂಟಾಗಿ ದೂರವಾಗುತ್ತಾರೆ. ಆ ಮಾತಿನಿಂದ ಬದುಕಿಗೆ ಅಪಾಯ ತಂದುಕೊಳ್ಳುತ್ತಾರೆ. ಇದರಿಂದ ತಿಳಿದುಕೊಳ್ಳಬೇಕಾದ ಮುಖ್ಯ ಸಂಗತಿ ಏನೆಂದರೆ, ಬದುಕು ಮಹತ್ವವೇ ವಿನಹ, ಮಾತಲ್ಲ. ಮಾತಿನ ಸರಿ ತಪ್ಪು ಬದಲು ಕೋಪಕ್ಕೆ ಕಾರಣ ಕಂಡುಕೊಂಡು, ಮಾತಿಗೆ ಅಷ್ಟು ಮಹತ್ವ ನೀಡದೆ ಇದ್ದರೆ ಬದುಕು ಸುಂದರವಾಗುತ್ತದೆ. ಅಲ್ಲವೇ?



**- ಎಂ.ಪಿ. ಜ್ಞಾನೇಶ್,** ಮಂಗಳೂರು

## ವಾದ್ಲಿಮಿರ್ ಪುಟಿನ್ ಭೇಟಿ: ಭದ್ರತಾ ಪಡೆಗಳಿಂದ ಪರಿಶೀಲನೆ

• ಪ್ರಜೋದಯ ವರದಿ



**ನವದೆಹಲಿ:** ರಷ್ಯಾ ಅಧ್ಯಕ್ಷ ವಾದ್ಲಿಮಿರ್ ಪುಟಿನ್ ಅವರ ಎರಡು ದಿನಗಳ ಭಾರತ ಭೇಟಿಯ ಹಿನ್ನಲೆಯಲ್ಲಿ ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ವಿವಿಧ ಭದ್ರತಾಪಡೆಗಳು ರಕ್ಷಣಾ ವ್ಯವಸ್ಥೆಯನ್ನು ಪರಿಶೀಲಿ ಸಿವೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಡಿ.4ರಂದು ಪುಟಿನ್ ಅವರು ಭಾರತಕ್ಕೆ ಭೇಟಿ ನೀಡಲಿದ್ದು, ಪ್ರಮುಖ ಸ್ಥಳಗಳಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ. ಪುಟಿನ್ ಅವರ ಭಾರತ ಪ್ರವಾಸದ ವೇಳಾಪಟ್ಟಿಯನ್ನು ತಯಾರಿಸ ಲಾಗಿದೆ. ಆದರೆ, ಪ್ರವಾಸದ ವೇಳೆ ಅವರು ಎಲ್ಲಿ ತಂಗಲಿದ್ದಾರೆ ಎನ್ನುವ ಮಾಹಿತಿಯನ್ನು ಭದ್ರತಾ ಉದ್ದೇಶದಿಂದ ಬಿಡುಗಡೆ ಗೊಳಿಸಿಲ್ಲ ಎಂದು ಹೇಳಿದ್ದಾರೆ.

ಪುಟಿನ್ ಅವರು ಭಾರತಕ್ಕೆ ಆಗಮಿಸುವ ವೇಳೆಯಿಂದ ಅವರು ನಿರ್ಗಮಿಸುವ ತನಕ ಅವರ ಪ್ರತಿಯೊಂದು ಚಲನವಲನವನ್ನು ದೆಹಲಿ ಪೊಲೀಸ್, ಕೇಂದ್ರ ಭದ್ರತಾ ಪಡೆಗಳು, ಭಯೋ ತ್ಪಾದಕ ನಿಗ್ರಹ ದಳ, ರಷ್ಯಾದ ಅಧಿಕಾರಿಗಳು ಸೇರಿ ವಿವಿಧ ಭದ್ರತಾ ಪಡೆಗಳು ಮೇಲ್ವಿಚಾರಣೆ ಮಾಡಲಿದ್ದಾರೆ. ಟ್ರಾಫಿಕ್‌ನಿಂದ ನೈರ್ಮಲ್ಯೀಕರಣದವರೆಗೆ ಎಲ್ಲಾ ವಿಷಯಗಳಲ್ಲೂ ನಿಗವಹಿಸಲಾಗಿದೆ ಎಂದು ತಿಳಿಸಿದ್ದಾರೆ.

ಪುಟಿನ್ ಭೇಟಿಗೂ ಮುನ್ನ ರಷ್ಯಾದ 50 ಮಂದಿ ಅಧಿಕಾರಿಗಳು ದೆಹಲಿಗೆ ಆಗಮಿಸಲಿದ್ದು, ಭದ್ರತಾ ವ್ಯವಸ್ಥೆಯನ್ನು ಪುನರ್ ಪರಿಶೀಲನೆ ಮಾಡಲಿದ್ದಾರೆಂದು ಮಾಹಿತಿ ನೀಡಿದ್ದಾರೆ.

# ಎಸ್‌ಐಆರ್ ಚರ್ಚೆಗೆ ಕೇಂದ್ರ ಸರ್ಕಾರ ಒಪ್ಪಿಗೆ

## ಪ್ರತಿಪಕ್ಷಗಳು ಪ್ರತಿಭಟನೆ ವಾಪಾಸ್ ಪಡೆಯಲಿ | ಸಚಿವ ಕಿರಣ್ ರಿಜಿಜು

• ಪ್ರಜೋದಯ ವರದಿ

**ನವದೆಹಲಿ:** ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಚರ್ಚೆಗೆ ಕೇಂದ್ರ ಸರ್ಕಾರ ಸಿದ್ಧವೆಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ರಾಜ್ಯಸಭೆಯಲ್ಲಿ ಹೇಳಿದ್ದಾರೆ.

ಸಂಸತ್ ಕಲಾಪ ಬಹಿಷ್ಕರಿಸಿ ಪ್ರತಿಪಕ್ಷಗಳು ಪ್ರತಿಭಟನೆ ಹಮ್ಮಿಕೊಂಡಿರುವ ಹಿನ್ನಲೆಯಲ್ಲಿ ಪ್ರತಿಕ್ರಿಯಿಸಿರುವ ಅವರು, ಚರ್ಚೆಗೆ ಅವಕಾಶ ಮಾಡಿಕೊಡಲಾಗುವುದು. ಆದರೆ ಸಮಯ ಮಿತಿಯನ್ನು ಒತ್ತಾಯಿಸಬಾರ ದೆಂದರು. ರಾಜ್ಯಸಭೆ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಪ್ರತಿಕ್ರಿಯಿಸಿ, ನಿಯಮ 267ರ ಅಡಿಯಲ್ಲಿ ನೋಟೀಸ್ ಸಲ್ಲಿಸಿದ್ದಾರೆ. ಸದನವು ಈ ಕೂಡಲೇ ಚರ್ಚೆಯನ್ನು ಪ್ರಾರಂಭಿಸಬೇಕೆಂದು ಆಗ್ರಹಿಸಿದರು.

ವರದಿಗಳ ಪ್ರಕಾರ, ಸಂಸತ್ತಿನಲ್ಲಿ ಚುನಾವಣಾ ಸುಧಾರಣೆಗಳ ಕುರಿತು ಚರ್ಚೆಗೆ ವಿರೋಧ ಪಕ್ಷದ ಬೇಡಿಕೆಗಳಿಗೆ ಸರ್ಕಾರ ಒಪ್ಪಿಕೊಂಡಿದೆ. ಚರ್ಚೆಯ ಸಮಯವನ್ನು ಸದನದ ವ್ಯವಹಾರ ಸಲಹಾ ಮಂಡಳಿ ನಿರ್ಧರಿಸುತ್ತದೆಂದು ಮೂಲಗಳು ತಿಳಿಸಿವೆ.

ವಿಷಯದ ಕುರಿತು ಸಂಸತ್ತಿನ ಎರಡೂ ಸದನಗಳಲ್ಲಿ ವಿರೋಧ ಪಕ್ಷವು ನಿರಂತರವಾಗಿ ಗದ್ದಲ ಸೃಷ್ಟಿಸುತ್ತಿದೆ. ಇದು ವ್ಯವಹಾರಕ್ಕೆ ಅಡ್ಡಿಪಡಿಸುತ್ತಿದೆ. ಇಷ್ಟಕ್ಕೆ ಸುಮ್ಮನಾಗದ ವಿಪಕ್ಷಗಳು ರಾಜ್ಯ ಸಭೆಯಿಂದ ಸಭಾತ್ಯಾಗ ಮಾಡಿದರು.

ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಮಂಗಳವಾರ ಸತತ ಎರಡನೇ ದಿನವೂ ಸಂಸತ್ತಿನ ಕಲಾಪಗಳನ್ನು ಅಡ್ಡಿಪಡಿಸಿದ್ದಕ್ಕಾಗಿ ವಿರೋಧ ಪಕ್ಷವನ್ನು ಟೀಕಿಸಿದರು. ಸ್ಥಾಪಿತ ನಿಯಮಗಳು ಮತ್ತು ಕಾರ್ಯವಿಧಾನಗಳ ಪ್ರಕಾರ ಸದನವು ಕಾರ್ಯನಿರ್ವಹಿಸಲು ಅವಕಾಶ ನೀಡುವಂತೆ ಸದಸ್ಯರನ್ನು ಒತ್ತಾಯಿಸಿದರು.

ಲೋಕಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಮಾತನಾಡಿದ ರಿಜಿಜು, ಸಂಸತ್ತು ಸಣ್ಣ ಪಕ್ಷ ಗಳ ಧ್ವನಿ ಸೇರಿ ಎಲ್ಲಾ ರಾಜಕೀಯ ಧ್ವನಿ ಗಳಿಗೆ ಅವಕಾಶ ನೀಡಬೇಕು ಎಂದು ಹೇಳಿ ದರು. ಕೆಲವೇ ಕೆಲವು ವಿರೋಧ ಪಕ್ಷಗಳು ಒಂದೇ ವಿಷಯದ ಮೇಲೆ ಕೇಂದ್ರೀಕರಿಸುವ ಮೂಲಕ ಇದನ್ನು ತಡೆಯಲು ಸಾಧ್ಯವಿಲ್ಲ ಎಂದರು.

ದೇಶದಲ್ಲಿ ನಾವು ಯಾವುದೇ ಸಮಸ್ಯೆಯನ್ನು ಸಣ್ಣದಾಗಿ ಪರಿಗಣಿಸದಿದ್ದರೂ, ಸಂಸತ್ತು ನಿಯಮಗಳು ಮತ್ತು ಕಾರ್ಯವಿಧಾನಗಳ ಪ್ರಕಾರ ಕಾರ್ಯನಿರ್ವಹಿಸುತ್ತದೆ. ವಿರೋಧ ಪಕ್ಷ ಒಂದೇ ವಿಷಯದ ಕಾರಣದಿಂದಾಗಿ ಇತರ ಸಮಸ್ಯೆಗಳನ್ನು ನಿಗ್ರಹಿಸಲು ಸಾಧ್ಯವಿಲ್ಲ. ಹಲವು ರಾಜ ಕೀಯ ಪಕ್ಷಗಳಿವೆ. ಒಬ್ಬ ಸದಸ್ಯರನ್ನು ಮಾತ್ರ ಹೊಂದಿರುವ ಸಣ್ಣ ಪಕ್ಷಗಳು ಸಹ. ನಾವು ಎಲ್ಲರ ಮಾತನ್ನು ಕೇಳಬೇಕು. ಎರಡು ಅಥವಾ ಮೂರು ಪಕ್ಷಗಳು ಒಟ್ಟಾಗಿ ಸಂಸ ತ್ತನ್ನು ಅಡ್ಡಿಪಡಿಸುವುದು ತಪ್ಪು. ನಿರಂತರ ಅಡ್ಡಿಗಳಿಗೆ ಪ್ರತಿಪಕ್ಷಗಳ ಚುನಾವಣಾ ಸೋಲಿನ ನಿರಾಶೆ ಕಾರಣ ಎಂದು ರಿಜಿಜು ಹೇಳಿದರು. ಅಂತಹ ನಡವಳಿಕೆಯು ಅವರ ಮೇಲಿನ ಸಾರ್ವಜನಿಕ ನಂಬಿಕೆ ಯನ್ನು ಕಳೆದುಕೊಳ್ಳುತ್ತಿದೆ ಎಂದು ಎಚ್ಚರಿಸಿದರು.




### ಡಿ.9 ರಂದು ಚರ್ಚೆಗೆ ಸಮ್ಮತಿ

ಡಿ.9 ರಂದು ಲೋಕಸಭೆಯಲ್ಲಿ ಎಸ್‌ಐಆರ್ ಕುರಿತು ಚರ್ಚೆ ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಮಂಗಳವಾರ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಪ್ರಾರಂಭಿಸಿದ ವಂದೇ ಮಾತರಂಗೆ 150 ವರ್ಷ ಕುರಿತ ಚರ್ಚೆಯನ್ನು ಹಿಂದಿನ ದಿನ ಕೆಳಮನೆಯಲ್ಲಿ ನಡೆಸಲಾಗುವುದು. ಎರಡೂ ಚರ್ಚೆಗಳಿಗೆ ತಲಾ 10 ಗಂಟೆ ಸಮಯ ನಿಗದಿಪಡಿಸಲಾಗಿದೆ. ಸದನವು ಸೂಕ್ತವೆಂದು ಭಾವಿಸಿದರೆ ಸಮಯ ವಿಸ್ತರಣೆ ಮಾಡುವ ಆಯ್ಕೆಯನ್ನು ಹೊಂದಿದೆ ಎಂದು ರಿಜಿಜು ಹೇಳಿದರು.

ಚುನಾವಣಾ ಸುಧಾರಣೆಗಳ ಕುರಿತಾದ ಚರ್ಚೆಯು ಚುನಾವಣಾ ಪ್ರಕ್ರಿಯೆಗೆ ಸಂಬಂಧಿಸಿದ ವಿಷಯಗಳನ್ನು ಒಳಗೊಂಡಿರುತ್ತದೆ. ತೆಗೆದುಕೊಂಡ ಈ ನಿರ್ಧಾರಕ್ಕೆ ಸಂಪೂರ್ಣವಾಗಿ ಸಹಕರಿ ಸುವಂತೆ ವಿರೋಧ ಪಕ್ಷಗಳಿಗೆ ಸಚಿವರು ಮನವಿ ಮಾಡಿದ್ದಾರೆ.

## ಪ್ರಧಾನಿ ಕಚೇರಿ ಇನ್ಮುಂದೆ ಸೇವಾ ತೀರ್ಥ

• ಪ್ರಜೋದಯ ವರದಿ

**ನವದೆಹಲಿ:** ಪ್ರಧಾನ ಮಂತ್ರಿ ಕಚೇರಿ ಹೆಸರನ್ನು ಬದಲಿಸಿದ್ದು ಇನ್ಮುಂದೆ ಸೇವಾ ತೀರ್ಥ ಬದಲಾಗಿದೆ.

ಕೇಂದ್ರ ಸಚಿವಾಲಯದ ಹೆಸರನ್ನು ಸಹ ಕರ್ತವ್ಯ ಭವನ ಎಂದು ಬದಲಾಯಿಸಲಾಗಿದೆ. ಈ ಬದಲಾವಣೆಗಳ ಜೊತೆಗೆ ಕೇಂದ್ರ ಸರ್ಕಾರವು ದೇಶಾದ್ಯಂತ ರಾಜಭವನಗಳನ್ನು ಲೋಕಭವನ ಎಂದು ಮರುನಾಮಕರಣ ಮಾಡುವುದಾಗಿ ಘೋಷಿಸಿದೆ. ಈ ಹಿಂದೆ ದೆಹಲಿಯ ರಾಜಪಥವನ್ನು ಕರ್ತವ್ಯ ಪಥ ಎಂದು ಮರುನಾಮಕರಣ ಮಾಡಲಾಗಿತ್ತು. ಈಗ ಪ್ರಧಾನಿ ನಿವಾಸವನ್ನು ಲೋಕ ಕಲ್ಯಾಣ ಮಾರ್ಗ ಎಂದು ಕರೆಯಲಾಗುವುದು.

ಈ ಬದಲಾವಣೆಗಳ ನಡುವೆ ಎಂಟು ರಾಜ್ಯ ಮತ್ತು ಉತ್ತರಾಖಂಡ, ಪಶ್ಚಿಮ ಬಂಗಾಳ ಮತ್ತು ತಮಿಳುನಾಡು ಸೇರಿ ಒಂದು ಕೇಂದ್ರಾಡಳಿತ ಪ್ರದೇಶವು ತಮ್ಮ ರಾಜಭವನಗಳ ಹೆಸರನ್ನು ಬದಲಾಯಿಸಿವೆ. ಗೃಹ ಸಚಿವಾಲಯ ಹೊರಡಿಸಿದ ನಿರ್ದೇಶನದ ನಂತರ ಈ ಬದಲಾ ವಣೆಗಳನ್ನು ಮಾಡಲಾಗಿದೆ. ಕಳೆದ ವರ್ಷ ರಾಜ್ಯಪಾಲರ ಸಮ್ಮೇಳನದಲ್ಲಿ ನಡೆದ ಚರ್ಚೆಯನ್ನು ಉಲ್ಲೇಖಿಸಿ ರಾಜಭವನ ಎಂಬ ಹೆಸರು ವಸಾಹತುಶಾಹಿ ಮನಸ್ಥಿತಿಯನ್ನು ಪ್ರತಿಬಿಂಬಿಸುತ್ತದೆಂದು ಸಚಿವಾಲಯ ಹೇಳಿತ್ತು.



ಗೃಹ ಸಚಿವಾಲಯದ ನಿರ್ದೇಶನವನ್ನು ಅನುಸರಿಸಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಮ್ಮ ಕಚೇರಿಗಳಿಂದ ರಾಜ್ ಪದ ತೆಗೆದು ಹಾಕಲು ಪ್ರಾರಂಭಿಸಿವೆ. ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ, ಅಸ್ಸಾಂ, ಉತ್ತರಾಖಂಡ್, ಒಡಿಶಾ, ಗುಜರಾತ್ ಮತ್ತು ತ್ರಿಪುರಗಳು ರಾಜ್ ಭವನ ಅನ್ನು ಲೋಕ ಭವನ ಎಂದು ಮರುನಾಮಕರಣ ಮಾಡಿವೆ. ಲಡಾಖ್‌ನ ರಾಜಭವನವನ್ನು ಲೋಕ ನಿವಾಸ್ ಎಂದು ಮರುನಾಮಕರಣ ಮಾಡಲಾಗಿದೆ.

ಭಾರತದಲ್ಲಿ ಬ್ರಿಟಿಷ್ ಪರಂಪರೆಯನ್ನು ನಿರ್ಮೂಲನೆ ಮಾಡಲು ಮೋದಿ ಸರ್ಕಾರ ಕೆಲಸ ಮಾಡುತ್ತಿದೆ. ಹಿಂದೆ ರಾಜ್‌ಪಥ್ ಅನ್ನು ಕರ್ತವ್ಯ ಪಥ ಎಂದು ಮರುನಾಮಕರಣ ಮಾಡಿತ್ತು. ಸರ್ಕಾರಿ ವೆಬ್‌ಸೈಟ್‌ಗಳು ಈಗ ಮುಖ್ಯವಾಗಿ ಹಿಂದಿಯಲ್ಲಿ ವಿಷಯ ಪ್ರದರ್ಶಿಸುತ್ತವೆ.

## 3.50 ಮೌಲ್ಯದ ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಅರಸೀಕೆರೆ:** ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ನಗದು ಸೇರಿ 3.50 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ಲಕ್ಷ್ಮಿಪುರ ಬಡಾವಣೆಯಲ್ಲಿ ನಡೆದಿದೆ.

ಪುಷ್ಪಕುಮಾರಿ ಎಂಬುವವರ ಮನೆಯಲ್ಲಿ ನ.29 ರಿಂದ 30ರ ಅವಧಿಯಲ್ಲಿ ಘಟನೆ ನಡೆ ದಿದೆ. ಪತಿ ಯೋಗೀಶ್ವರಪ್ಪ ಅವರಿಗೆ ಅನಾರೋಗ್ಯ ಕಾಣಿಸಿಕೊಂಡ ಹಿನ್ನಲೆಯಲ್ಲಿ ಬೆಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಡಿ.1 ರಂದು ಪಕ್ಕದ ಮನೆಯವರು ಕರೆ ಮಾಡಿ ಮನೆ ಬಾಗಿಲು ತೆರೆದಿರುವ ವಿಚಾರ ತಿಳಿಸಿದ್ದಾರೆ.

ಅದೇ ದಿನ ಬಂದು ನೋಡಿದಾಗ ಮುಂಬಾಗಿಲ ಬೀಗ ಮುರಿದಿರುವುದು ಗೊತ್ತಾಗಿದೆ. ಬೀರುವಿನಲ್ಲಿಟ್ಟಿದ್ದ 1 ಕೆ.ಜಿ. ತೂಕದ ಬೆಳ್ಳಿ ದೀಪ, 200 ಗ್ರಾಂ ತೂಕದ ಒಂದು ಬೆಳ್ಳಿ ಶಿವನ ಮುಖ, 200 ಗ್ರಾಂ ತೂಕದ ಒಂದು ಜೊತೆ ಬೆಳ್ಳಿ ಕುಂಕುಮ ಬಟ್ಟಲು, 100 ಗ್ರಾಂ ತೂಕದ ಒಂದು ಜೊತೆ ಏಕಾರತಿ, 350 ಗ್ರಾಂ ತೂಕದ ಒಂದು ಬೆಳ್ಳಿ ಚೊಂಬು, 100 ಗ್ರಾಂ ತೂಕದ ಒಂದು ಜೊತೆ ಕುಂಕುಮದ ಬಟ್ಟಲು, 50 ಗ್ರಾಂ ತೂಕದ ಒಂದು ಏಕಾರತಿ, 50 ಗ್ರಾಂ ತೂಕದ 5 ಬೆಳ್ಳಿ ಕಾಯಿನ್, 400 ಗ್ರಾಂ ತೂಕದ ಒಂದು ಜೊತೆ ಬೆಳ್ಳಿ ಕಾಲು ಚೈನ್, 200 ಗ್ರಾಂ ತೂಕದ 2 ಸುಬ್ರಹ್ಮಣ್ಯ ದೇವರ ಮುಖ, 100 ಗ್ರಾ ತೂಕದ ಒಂದು ಲಕ್ಷ್ಮೀ ವಿಗ್ರಹ, 100 ಗ್ರಾಂ ತೂಕದ ಒಂದು ಜೊತೆ ಕಾಲು ಬಳೆ, 200 ಗ್ರಾಂ ತೂಕದ 3 ಜೊತೆ ಕಾಲು ಚೈನ್, 80 ಗ್ರಾಂ ತೂಕದ ಬೆಳ್ಳಿ ಲಕ್ಷ್ಮೀ ನರಸಿಂಹ ವಿಗ್ರಹ, 60 ಗ್ರಾಂ ತೂಕದ 3 ಬೆಳ್ಳಿಯ ಕೈಬಳೆ, 30 ಗ್ರಾಂ ತೂಕದ 3 ಜೊತೆ ಚಿನ್ನದ ಓಲೆ, 8 ಗ್ರಾಂ ತೂಕದ ಚಿನ್ನದ ಮೂಗುಬೊಟ್ಟು ಹಾಗು 50 ಸಾವಿರ ರೂ. ನಗದು ಕಳುವಾಗಿದೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಹಸು ಕಳ್ಳತನ

**ಅರಸೀಕೆರೆ:** ತೋಟದ ಮನೆಯ ಕೊಟ್ಟಿಗೆಯಲ್ಲಿ ಕಟ್ಟಿದ್ದ ಹಸುವನ್ನು ಯಾರೋ ಕಳವು ಮಾಡಿರುವ ಘಟನೆ ತಾಲ್ಲೂಕಿನ ಲಾಲನಕೆರೆ ಗ್ರಾಮದಲ್ಲಿ ನಡೆದಿದೆ. ಗ್ರಾಮದ ರತ್ನಮ್ಮ ಎಂಬುವವರಿಗೆ ಸೇರಿದ 1 ಲಕ್ಷ ರೂ. ಬೆಲೆಯ ಹಸು ನಾಪತ್ತೆ ಯಾಗಿದೆ. ನ.28ರಂದು ಕೊಟ್ಟಿಗೆಯಲ್ಲಿ ಹಸು ಕಟ್ಟಿ ಮನೆಗೆ ಬಂದಿದ್ದರು. ಮಾರನೇ ದಿನ ನೋಡಿದಾಗ ಬಾಗಿಲು ಮುರಿದಿರುವುದು ಗೊತ್ತಾಗಿದೆ. ಹಸುವನ್ನು ಕಳವು ಮಾಡಿದ್ದು ಹುಡುಕಿ ಕೊಡ ಬೇಕೆಂದು ಗಂಡಸಿ ಠಾಣೆಗೆ ದೂರು ಸಲ್ಲಿಸಿದ್ದಾರೆ.

# ದಿತ್ವಾ ಚಂಡಮಾರುತ: ಮೃತರ ಸಂಖ್ಯೆ 410ಕ್ಕೆ ಏರಿಕೆ

• ಪ್ರಜೋದಯ ವರದಿ

**ಶ್ರೀಲಂಕಾ:** ದ್ವೀಪ ರಾಷ್ಟ್ರ ಶ್ರೀಲಂಕಾದಲ್ಲಿ ದಿತ್ವಾ ಚಂಡಮಾರುತದಿಂದ ಉಂಟಾದ ಭೂಕುಸಿತ ಹಾಗೂ ಪ್ರವಾಹದಿಂದಾಗಿ ಈವರೆಗೆ 410 ಮಂದಿ ಮೃತಪಟ್ಟಿದ್ದು, 336 ಜನ ಕಾಣೆಯಾಗಿದ್ದಾರೆ. 4.07 ಲಕ್ಷ ಕುಟುಂಬಗಳ 14.66 ಲಕ್ಷ ಜನರು ಬಾಧಿತರಾಗಿದ್ದಾರೆ. 15 ಪ್ರಮುಖ ಸೇತುವೆ ಗಳು, 256 ರಸ್ತೆಗಳು ಹಾನಿಗೊಳಗಾಗಿವೆ ಎಂದು ವಿಪತ್ತು ನಿರ್ವಹಣಾ ಕೇಂದ್ರ ತಿಳಿಸಿದೆ.

ಸೇನಾ ಪಡೆ ಮತ್ತು ಪೊಲೀಸ್ ಇಲಾಖೆಯ ನೂರಾರು ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ಕೈಗೊಂಡಿದ್ದಾರೆ. ಮಣ್ಣಿನಡಿ ಸಿಲುಕಿರುವ ಜನರಿಗಾಗಿ ಶೋಧ ಕಾರ್ಯ ನಡೆಸುತ್ತಿದ್ದಾರೆ. ರಸ್ತೆ, ವಿದ್ಯುತ್ ಸಂಪರ್ಕ ಮರುಸ್ಥಾಪಿಸುವ ಕಾರ್ಯ ಸಮರೋಪಾದಿಯಲ್ಲಿ ಸಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ದಕ್ಷಿಣ ಮತ್ತು ಆಗ್ನೇಯ ಏಷ್ಯಾದಾದ್ಯಂತ ಮಾರಕ ಬಿರುಗಾಳಿ ಬೀಸಿದ್ದು, ಇಂಡೋನೇಷ್ಯಾ, ಮಲೇಷ್ಯಾ ಮತ್ತು ಥಾಯ್ಲೆಂಡ್‌ನ ಹೆಚ್ಚಿನ ಭಾಗಗಳನ್ನು ಧ್ವಂಸ ಗೊಳಿಸಿದೆ. ನೂರಾರು ಜೀವಗಳನ್ನು ಬಲಿ ಪಡೆದಿದೆ.


**ತುರ್ತು ಸ್ಪಂದನೆ:** ಪ್ರಮುಖ ಪಾತ್ರ ವಹಿಸಿದ ಭಾರತ

ದಿತ್ವಾ ಚಂಡಮಾರುತದಿಂದ ಉದ್ಭವಿಸಿರುವ ತುರ್ತು ಪರಿಸ್ಥಿತಿಯನ್ನು ಸಮರ್ಪಕವಾಗಿ ನಿಭಾಯಿಸುವ ಕಾರ್ಯದಲ್ಲಿ ಭಾರತವು ಪ್ರಮುಖ ಪಾತ್ರ ವಹಿಸಿದೆ ಎಂದು ಶ್ರೀಲಂಕಾದ ಅಧ್ಯಕ್ಷ ಅನುರಾ ಕುಮಾರ ದಿಸ್ಸ ನಾಯಕೆ ಅವರ ಕಚೇರಿ ಮಂಗಳವಾರ ತಿಳಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಅನುರಾ ಕುಮಾರ ದಿಸ್ಸ ನಾಯಕೆ ಅವರ ಜೊತೆ ಮಾತನಾಡಿ, ಚಂಡಮಾರುತದಿಂದಾ ಅವಘಡಗಳಲ್ಲಿ ಮೃತರಿಗೆ ಸಂತಾಪ ಸೂಚಿಸಿದ್ದಾರೆ. ಈ ಕಷ್ಟದ ಸಮಯದಲ್ಲಿ ಭಾರತವು ಶ್ರೀಲಂಕಾ ಮತ್ತು ಅದರ ಜನರೊಂದಿಗೆ ದೃಢವಾಗಿ ನಿಲ್ಲುತ್ತದೆ ಎಂದು ಪುನರುಚ್ಚರಿಸಿದ್ದಾರೆಂದು ಹೇಳಿದೆ.

ದ್ವೀಪ ರಾಷ್ಟ್ರವು ವ್ಯಾಪಕ ಪ್ರವಾಹ ಭೂಕುಸಿತ ಮತ್ತು ಮೂಲಸೌಕರ್ಯ ನಾಶದಿಂದ ಸಂಕಷ್ಟಕ್ಕೆ ಸಿಲುಕಿದೆ. ಹಲವು ಜಿಲ್ಲೆಗಳು ಪ್ರತ್ಯೇಕಗೊಂಡಿವೆ. ಭಾರತವು ಸಾಗರ ಬಂಧು ಕಾರ್ಯಾಚರಣೆಯಡಿ ಎನ್‌ಡಿಆರ್‌ಎಫ್‌ನ 80 ಸಿಬ್ಬಂದಿಯನ್ನು ದ್ವೀಪ ರಾಷ್ಟ್ರಕ್ಕೆ ಕಳುಹಿಸಿದೆ.





### ತುರ್ತು ಸ್ಪಂದನೆ

ಪ್ರಮುಖ ಪಾತ್ರ ವಹಿಸಿದ ಭಾರತ ದಿತ್ವಾ ಚಂಡಮಾರುತದಿಂದ ಉದ್ಭವಿಸಿರುವ ತುರ್ತು ಪರಿಸ್ಥಿತಿಯನ್ನು ಸಮರ್ಪಕವಾಗಿ ನಿಭಾಯಿಸುವ ಕಾರ್ಯದಲ್ಲಿ ಭಾರತವು ಪ್ರಮುಖ ಪಾತ್ರ ವಹಿಸಿದೆ ಎಂದು ಶ್ರೀಲಂಕಾದ ಅಧ್ಯಕ್ಷ ಅನುರಾ ಕುಮಾರ ದಿಸ್ಸ ನಾಯಕೆ ಅವರ ಕಚೇರಿ ಮಂಗಳವಾರ ತಿಳಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಅನುರಾ ಕುಮಾರ ದಿಸ್ಸ ನಾಯಕೆ ಅವರ ಜೊತೆ ಮಾತನಾಡಿ, ಚಂಡಮಾರುತದಿಂದಾ ಅವಘಡಗಳಲ್ಲಿ ಮೃತರಿಗೆ ಸಂತಾಪ ಸೂಚಿಸಿದ್ದಾರೆ. ಈ ಕಷ್ಟದ ಸಮಯದಲ್ಲಿ ಭಾರತವು ಶ್ರೀಲಂಕಾ ಮತ್ತು ಅದರ ಜನರೊಂದಿಗೆ ದೃಢವಾಗಿ ನಿಲ್ಲುತ್ತದೆ ಎಂದು ಪುನರುಚ್ಚರಿಸಿದ್ದಾರೆ ಎಂದು ಹೇಳಿದೆ. ದ್ವೀಪ ರಾಷ್ಟ್ರವು ವ್ಯಾಪಕ ಪ್ರವಾಹ ಭೂಕುಸಿತ ಮತ್ತು ಮೂಲಸೌಕರ್ಯ ನಾಶದಿಂದ ಸಂಕಷ್ಟಕ್ಕೆ ಸಿಲುಕಿದೆ. ಹಲವು ಜಿಲ್ಲೆಗಳು ಪ್ರತ್ಯೇಕಗೊಂಡಿವೆ. ಭಾರತವು ಸಾಗರ ಬಂಧು ಕಾರ್ಯಾಚರಣೆಯಡಿ ಎನ್‌ಡಿಆರ್‌ಎಫ್‌ನ 80 ಸಿಬ್ಬಂದಿಯನ್ನು ದ್ವೀಪ ರಾಷ್ಟ್ರಕ್ಕೆ ಕಳುಹಿಸಿದೆ. ಇಂಡೋನೇಷ್ಯಾದ ಸುಮಾತ್ರ ದ್ವೀಪದಲ್ಲಿ ಉಂಟಾದ ಪ್ರವಾಹ ಹಾಗೂ ಭೂಕುಸಿತದಿಂದ ಮೃತಪಟ್ಟವರ ಸಂಖ್ಯೆ 753ಕ್ಕೆ ಏರಿಕೆಯಾಗಿದೆ. 504 ಮಂದಿ ನಾಪತ್ತೆಯಾಗಿದ್ದಾರೆಂದು ಮೂಲಗಳು ತಿಳಿಸಿವೆ.

## ಹೈಕಮಾಂಡ್ ಹೇಳಿದರೆ ಡಿ.ಕೆ.ಶಿ. ಮುಖ್ಯಮಂತ್ರಿ

» ಮೊದಲನೇ ಪುಟದಿಂದ

ಅಭ್ಯರ್ಥಿಗಳನ್ನು ಅಂತಿಮಗೊಳಿಸಬೇಕಿದೆ. ಈ ವಿಚಾರವಾಗಿ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಅವರೊಂದಿಗೆ ಚರ್ಚೆ ಮಾಡಿದ್ದೇವೆ. ಶಾಸಕರಿಗೆ ನೀಡ ಬೇಕಾದ ಸಂದೇಶಗಳು, ವಿರೋಧ ಪಕ್ಷಗಳು ಯಾವುದೇ ವಿಚಾರ ಪ್ರಸ್ತಾಪಿ ಸಿದರೂ ನಾವು ಒಂದೇ ಧ್ವನಿಯಲ್ಲಿ ಎದುರಿಸಲು ಸಿದ್ಧರಿದ್ದೇವೆ ಎಂದರು.

ದೆಹಲಿಗೆ ಹೋಗಿ ಸರ್ವಪಕ್ಷ ಸಂಸದರ ಸಭೆ ನಡೆಸುವ ಬಗ್ಗೆ ಚರ್ಚೆ ಮಾಡಿದ್ದು, ಡಿ.8 ರಂದು ದೆಹಲಿಗೆ ಹೋಗಿ ವಾಪಸ್ಸಾಗಬೇಕೆಂದು ತೀರ್ಮಾನಿಸಿದ್ದೇವೆ. ಮೇಕೆದಾಟು ವಿಚಾರವಾಗಿ ನ್ಯಾಯಾಲಯದ ತೀರ್ಪು ಬಂದಿದ್ದು, ಮೆಕ್ಕೆಜೋಳ ದರ ವಿಚಾರ, ಕೇಂದ್ರ ಸರ್ಕಾರದಿಂದ ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ನೀರಾವರಿ ಯೋಜನೆಗಳಿಗೆ ಅನುದಾನ ಬಾರದಿರುವ ವಿಚಾರವಾಗಿ ಸಂಸದರ ಜೊತೆ ಚರ್ಚೆ ಮಾಡಿ ಅವರಿಗೆ ಜವಾಬ್ದಾರಿ ನೀಡಬೇಕಾಗಿದೆ. ಈ ಸಭೆಗೆ ವಿಧಾನಸಭೆ ಹಾಗು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರನ್ನು, ಜೆಡಿಎಸ್ ನಾಯಕರನ್ನು ಕರೆದುಕೊಂಡು ಹೋಗಲು ತೀರ್ಮಾನಿಸಿದ್ದೇವೆಂದು ಹೇಳಿದರು.

## ಕಾಂಗ್ರೆಸ್ ರೈತ ವಿರೋಧಿ ನೀತಿ ವಿರುದ್ಧ ಬಿಜೆಪಿ ಪ್ರತಿಭಟನೆ

» ಮೊದಲನೇ ಪುಟದಿಂದ

ಪ್ರಕಾರ ಈ ವರ್ಷ 14.58 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿ, 10,748 ಕೋ.ರೂ. ನಷ್ಟವಾಗಿದೆ. 9 ಜಿಲ್ಲೆಗಳಲ್ಲಿ ಹಾನಿ ಗಂಭೀರವಾಗಿದೆ. ಆದರೆ, ಸರ್ಕಾರದಿಂದ ಸೂಕ್ತ ಪರಿಹಾರ ಸಿಕ್ಕಿಲ್ಲವೆಂದು ದೂರಿದರು.

ಪರಿಹಾರ ನೀಡಿದ್ದರೂ, ಅದು ವೈಜ್ಞಾನಿಕವಾಗಿಲ್ಲ. ಇದರಿಂದ ರೈತರ ಬದುಕಿಗೆ ಹೊಡೆತ ಬಿದ್ದಿದೆ. ಸರ್ಕಾರ ಕೂಡಲೇ ಮರು ಸಮೀಕ್ಷೆ ನಡೆಸಿ, ಪರಿಹಾರ ಮೊತ್ತ ಹೆಚ್ಚಿಸಬೇಕು. ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಕೊಯ್ಲು ಹಂತದಲ್ಲಿ ಸುರಿದ ಭಾರೀ ಮಳೆಯಿಂದ ತೊಗರಿಬೆಳೆ, ಹೆಸರು, ಹತ್ತಿ, ಮೆಕ್ಕೆಜೋಳ ಸೇರಿ ಅನೇಕ ಬೆಳೆ ನಷ್ಟವಾಗಿದೆ. ಪಶ್ಚಿಮಘಟ್ಟ ಮತ್ತು ಕರಾವಳಿ ಜಿಲ್ಲೆಗಳಲ್ಲಿ ಪ್ರಾಣಿ-ಮಾನವ ಸಂಘರ್ಷ, ಕಾಫಿ-ಅಡಿಕೆ, ಮೆಣಸು, ಏಲಕ್ಕಿ ಬೆಳೆ ನಾಶವಾಗಿದೆ. ಇಷ್ಟಾದರೂ ಎರಡೂವರೆ ವರ್ಷದಿಂದ ಸರ್ಕಾರ ಬದುಕಿಲ್ಲ ಅನ್ನಿಸಿದೆ ಎಂದು ಟೀಕಿಸಿದರು.

ಯಾವುದೇ ಸರ್ಕಾರ ರೈತರನ್ನು ಎದುರು ಹಾಕಿಕೊಂಡು ಬದುಕಿಲ್ಲ. ಪಿಎಂ ಕಿಸಾನ್ ಸಮ್ಮಾನ್ ಹಣ ಕಡಿತಗೊಳಿಸಲಾಗಿದೆ. 620 ಕೋ.ರೂ.ಗಳನ್ನು ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನವಾಗಿ ನೀಡಬೇಕು. ಅದನ್ನು ನೋಡಿದರೆ ಸರ್ಕಾರ ಯಾರ ಪರ ಇದೆ ಎಂಬ ಅನುಮಾನ ವ ಮೂಡಿದೆ.ಪರಿಹಾರಕ್ಕಾಗಿಕಬ್ಬುಬೆಳೆಗಾರರು ತಿಂಗಳುಗಟ್ಟಲೆ ಹೋರಾಟ ಮಾಡಿದರೂ ಸೂಕ್ತ ಪರಿಹಾರ ಸಿಗುತ್ತಿಲ್ಲವೆಂದು ಆರೋಪಿಸಿದರು.

ವಿಧಾನ ಪರಿಷತ್ ಸದಸ್ಯ ಡಿ.ಎಸ್.ಅರುಣ್, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಪ್ರಧಾನ ಕಾರ್ಯದರ್ಶಿಗಳಾದ ಅಮಿತ್ ಶೆಟ್ಟಿ, ಗಿರೀಶ್ ನಂಬೀಹಳ್ಳಿ, ಎಸ್.ಡಿ.ಚಂದ್ರು, ಗಿರೀಶ್, ಬಿ.ಹೆಚ್. ನಾರಾಯಣಗೌಡ, ಪ್ರಸನ್ನಕುಮಾರ್, ವೇದಾವತಿ, ಚನ್ನಕೇಶವ, ಶೋಭನ್ ಬಾಬು, ರಾಜಕುಮಾರ್ ಇದ್ದರು.

## ಜಿಲ್ಲಾದ್ಯಂತ ಭಕ್ತಿ ಪೂರ್ವಕ ಹನುಮ ಜಯಂತಿ ಆಚರಣೆ



» ಮೊದಲನೇ ಪುಟದಿಂದ

ಬೆಳಿಗ್ಗೆ ಸುಪ್ರಭಾತ ಸೇವೆ, ಅಭಿಷೇಕ, 8 ಗಂಟೆಗೆ ಮಹಾ ಮಂಗಳಾರತಿ, 9ಕ್ಕೆ ಮಾರುತಿ ಹೋಮ, ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿ ನಂತರ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನೆರವೇರಿತು. ಮಧ್ಯಾಹ್ನ 12.30ಕ್ಕೆ ಸಾವಿರಾರು ಜನರಿಗೆ ಪ್ರಸಾದ ರೂಪದಲ್ಲಿ ಅನ್ನಸಂತರ್ಪಣೆ ನೆರವೇರಿಸಿದರು. ಸಂಜೆ 7.30ಕ್ಕೆ ಮಾರುತಿ ಉತ್ಸವ, ರಾತ್ರಿ 9.30ಕ್ಕೆ ಮಹಾಮಂಗಳಾರತಿ ಹಾಗು ಲಾಲಿ ಕಾರ್ಯಕ್ರಮ ವಿಜೃಂಭಣೆಯಿಂದ ಜರುಗಿತು.

ದೇವಾಲಯದ ಅರ್ಚಕ ರಕ್ಷಿತ್ ಭಾರದ್ವಾಜ್ ಅವರು ಮಾತನಾಡಿ, ಶ್ರೀ ಆಂಜನೇಯ, ಸುಬ್ರಮಣ್ಯ ದೇವಸ್ಥಾನದಲ್ಲಿ ಈ ವರ್ಷವೂ ಹನುಮ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಇವತ್ತು ಮಾರುತಿಗೆ ವಿಶೇಷ ಅಲಂಕಾರ ಮಾಡಲಾಗಿದೆ. ದೇವಾಲಯದಲ್ಲಿ ಅಲಂಕಾರಕ್ಕೂ ಬಹಳ ಪ್ರಾಮುಖ್ಯತೆ ಕೊಡಲಾಗಿದೆ. ಸಾವಿರಾರು ಜನರಿಗೆ ಪ್ರಸಾದ ರೂಪದಲ್ಲಿ ಅನ್ನಸಂತರ್ಪಣೆ ಮಾಡಲಾಗಿದ್ದು, ಭಗವಂತನು ಎಲ್ಲರಿಗೂ ಒಳಿತು ಮಾಡಲಿ ಎಂದು ಪ್ರಾರ್ಥಿಸಿರುವುದಾಗಿ ಹೇಳಿದರು.

## ಪಾಕಿಸ್ತಾನದ ದುಷ್ಟ ಕೃತ್ಯಕ್ಕೆ ಕಾಂಗ್ರೆಸ್ ಕುಮ್ಮಕ್ಕು

» ಮೊದಲನೇ ಪುಟದಿಂದ

ದತ್ತಪೀಠ ಹಿಂದೂಗಳಿಗೆ ಸೇರಿದೆ ಎಂಬ ಮೂಲ ದಾಖಲೆಗಳಿವೆ. ಮೈಸೂರು ಒಡೆಯರು ಸೇರಿ ಹತ್ತಾರು ರಾಜವಂಶದವರು ಮತ್ತು ಮಠಗಳು ಇಲ್ಲಿಗೆ ಬರುತ್ತಿದ್ದ ನಿದರ್ಶನಗಳಿವೆ. ನಿಮ್ಮ ಸೊಕ್ಕು, ದರ್ಪ ಬಿಟ್ಟು ಪಕ್ಕದ ನಾಗೇನಹಳ್ಳಿ ದರ್ಗಾಕ್ಕೆ ಸ್ಥಳಾಂತರವಾಗಿ ಕೋಮು ಸಾಮರಸ್ಯ ಕಾಪಾಡಬೇಕು. ದತ್ತ ಪೀಠವನ್ನು ಹಿಂದೂಗಳು ಯಾವತ್ತು ಬಿಟ್ಟುಕೊಡುವುದಿಲ್ಲವೆಂದು ಸ್ಪಷ್ಟಪಡಿಸಿದರು.

ಹಿಂದೂ ಸಮಾಜ ಎಂದಿಗೂ ಕತ್ತಿ, ಗುರಾಣಿ ಹಿಡಿದು ಇನ್ನೊಂದು ಧರ್ಮದ ಮೇಲೆ ಯುದ್ಧ ಮಾಡಲಿಲ್ಲ. ಹಿಂದೂಗಳು ಶಾಂತಿ ಪ್ರತಿಪಾದಿಸುತ್ತಾರೆಂದ ಮಾತ್ರಕ್ಕೆ ಹೇಡಿಗಳಲ್ಲ. ಹಿಂದೂಗಳನ್ನು ವಿನಾಕಾರಣ ಕೆಣಕಿದರೆ ಇಲಿಯ ಬಿಲದಲ್ಲಿ ಅಡಗಿದರೂ ಬಿಡುವುದಿಲ್ಲವೆಂದು ಗುಡುಗಿದರು. ಹಾಸನಕ್ಕೆ ನನಗೆ ಪ್ರವೇಶ ನೀಡಲು ಪೊಲೀಸರು, ಅಧಿಕಾರಿಗಳು ಚರ್ಚೆ ನಡೆಸುತ್ತಾರೆ. ಈ ಜಿಲ್ಲೆ ಪಾಕಿಸ್ತಾನದಲ್ಲಿಲ್ಲ. ಅಗತ್ಯ ಬಿದ್ದರೆ ಪಾಕಿಸ್ತಾನಕ್ಕೆ ಹೋಗುವೆ, ಗೋಹತ್ಯೆ ಮತಾಂತರ, ಲವ್ ಜಿಹಾದ್‌ನಂತಹ ದೇಶ ವಿರೋಧಿ ಕೃತ್ಯಗಳನ್ನು ಎಂದಿಗೂ ಸಹಿಸುವುದಿಲ್ಲವೆಂದು ಎಚ್ಚರಿಕೆ ನೀಡಿದರು.

ಮಸೀದಿಯಲ್ಲಿ ಕುರಾನ್ ಪಠಣ, ಚರ್ಚ್‌ನಲ್ಲಿ ಬೈಬಲ್ ಪ್ರಾರ್ಥನೆ ಸಾಮಾನ್ಯ. ಆದರೆ, ಹಿಂದೂಗಳಿಗೆ ಸೇರಿದ ಚನ್ನಕೇಶವಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಕುರಾನ್ ಪಠಣ ಮಾಡುವುದು ಎಷ್ಟರ ಮಟ್ಟಿಗೆ ಸರಿ. ಶಾಸಕ ಹೆಚ್.ಕೆ.ಸುರೇಶ್ ಅವರು ಕುರಾನ್ ಪಠಣಕ್ಕೆ ಕಡಿವಾಣ ಹಾಕಿರುವುದು ಒಳ್ಳೆಯ ಬೆಳವಣಿಗೆ ಎಂದು ಮೆಚ್ಚುಗೆ ಸೂಚಿಸಿದರು.

ಯಸಳೂರು ಬೃಹನ್ಮಠ ತೆಂಕಲಗೂಡು ಮಠದ ಶ್ರೀ ಚನ್ನಸಿದ್ದೇಶ್ವರ ಸ್ವಾಮೀಜಿ, ಶಾಸಕ ಹೆಚ್.ಕೆ.ಸುರೇಶ್, ರಾಷ್ಟ್ರ ಧರ್ಮ ಸಂಸ್ಥಾಪಕ ಅಧ್ಯಕ್ಷ ಸಂತೋಷ ಕೆಂಚಾಂಬ, ಜಿಲ್ಲಾ ಪ್ಲಾಂಟರ್ಸ್ ಅಸೋಸಿಯೇಷನ್ ಉಪಾಧ್ಯಕ್ಷ ಮಂಜುನಾಥ ಶೆಟ್ಟಿ, ವಿಶ್ವ ಹಿಂದೂ ಪರಿಷತ್ ವಿಭಾಗ ಕಾರ್ಯದರ್ಶಿ ಮಹಿಪಾಲ್, ನಾಗೇಶ್, ತಾಲ್ಲೂಕು ಕಾರ್ಯದರ್ಶಿ, ವಿಜಯ ಕುಮಾರ್, ಭರತ್ ಇತರರಿದ್ದರು.


## ಎರಡು ಹಂತದಲ್ಲಿ ಜನಗಣತಿ: ಕೇಂದ್ರ ಮಾಹಿತಿ

• ಪ್ರಜೋದಯ ವರದಿ

**ನವದೆಹಲಿ:** ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸುವುದಾಗಿ ಕೇಂದ್ರ ಸರ್ಕಾರ ಲೋಕಸಭೆಗೆ ತಿಳಿಸಿದೆ.

2026ರ ಏಪ್ರಿಲ್‌ನಿಂದ ಸೆಪ್ಟೆಂಬರ್ ವರೆಗೆ ಮೊದಲ ಮತ್ತು 2027ರ ಫೆಬ್ರವರಿಯಲ್ಲಿ 2ನೇ ಹಂತದ ಗಣತಿ ನಡೆಸಲಾಗುವುದೆಂದು ಸರ್ಕಾರ ಲೋಕ ಸಭೆಗೆ ತಿಳಿಸಿದೆ. ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರ ಪ್ರಶ್ನೆಗೆ ಉತ್ತರಿಸಿದ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಅವರು, ಎರಡು ಹಂತಗಳಲ್ಲಿ ಜನಗಣತಿ ನಡೆಸಲಾಗುವುದು. ಹಂತ-ಮನೆ ಪಟ್ಟಿ ಮತ್ತು ವಸತಿ ಗಣತಿ ನಂತರ ಹಂತ -ಜನಸಂಖ್ಯಾ ಎಣಿಕೆ ಆಗಿರುತ್ತವೆಂದು ಹೇಳಿದರು.

ಏಪ್ರಿಲ್‌ನಿಂದ ಸೆ.2026ರ ವರೆಗಿನ ಮೊದಲ ಹಂತವನ್ನು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳ ಅನುಕೂಲಕ್ಕೆ ಅನುಗುಣವಾಗಿ 30 ದಿನಗಳ ಅವಧಿಯಲ್ಲಿ ನಡೆಸಲಾಗು ವುದು. ಲಡಾಖ್ ಕೇಂದ್ರಾಡಳಿತ ಪ್ರದೇಶ ಮತ್ತು ಜಮ್ಮು ಮತ್ತು ಕಾಶ್ಮೀರ ಹಾಗು ಹಿಮಾಚಲ ಪ್ರದೇಶ, ಉತ್ತರಾಖಂಡ ರಾಜ್ಯಗಳ ಹಿಮದಿಂದ ಆವೃತವಲ್ಲದ ಪ್ರದೇಶಗಳನ್ನು ಹೊರತುಪಡಿಸಿ ಇತರ ಪ್ರದೇಶಗಳಲ್ಲಿ ಫೆ. 2027ರಲ್ಲಿ ಜನ ಗಣತಿ ನಡೆಯಲಿದೆ. ಅಲ್ಲಿ ಅದನ್ನು ಸೆಪ್ಟೆಂಬರ್ 2026 ರಲ್ಲಿ ಉಲ್ಲೇಖ ದಿನಾಂಕಕ್ಕೆ ಮಾಡಲಾ ಗುತ್ತದೆಂದರು.




ಜನಗಣತಿ ಪ್ರಶ್ನಾವಳಿಯನ್ನು ಪ್ರತಿ ಕಾರ್ಯಕ್ಕೂ ಮೊದಲು ವಿವಿಧ ಸಚಿವಾಲಯ, ಇಲಾಖೆ, ಸಂಸ್ಥೆಗಳು ಮತ್ತು ಜನಗಣತಿ ದತ್ತಾಂಶ ಬಳಕೆದಾರರಿಂದ ಬರುವ ಒಳಹರಿವು ಮತ್ತು ಸಲಹೆಗಳ ಆಧಾರದ ಮೇಲೆ ಅಂತಿಮಗೊಳಿಸಲಾಗುತ್ತದೆಂದು ಸಚಿವರು ಹೇಳಿದರು.

ಜನಗಣತಿಯು 150 ವರ್ಷಗಳಿಗೂ ಹೆಚ್ಚಿನ ಇತಿಹಾಸ ಹೊಂದಿದೆ. ಹಿಂದಿನ ಕಾರ್ಯಗಳಿಂದ ಕಲಿತದ್ದನ್ನು ಮುಂದಿನ ಜನಗಣತಿಯನ್ನು ನಡೆಸಲು ಪರಿಗಣಿಸಲಾಗಿದೆಂದು ಸಚಿವರು ಹೇಳಿದರು. ಪ್ರತ್ಯೇಕ ಪ್ರಶ್ನೆಯಲ್ಲಿ ಈ ವರ್ಷ ಏ.30 ರಂದು ರಾಜಕೀಯ ವ್ಯವಹಾರಗಳ ಸಂಪುಟ ಸಮಿತಿಯು ನಿರ್ಧರಿಸಿದಂತೆ ಜನಗಣತಿಯಲ್ಲಿ ಜಾತಿ ಎಣಿಕೆ ಸಹ ಮಾಡಲಾಗುತ್ತದೆಂದು ಸಚಿವರು ಹೇಳಿದರು.

ಮತ್ತೊಂದು ಪ್ರತಿಕ್ರಿಯೆಯಲ್ಲಿ, 2027ರ ಜನಗಣತಿಯನ್ನು ಡಿಜಿಟಲ್ ವಿಧಾನಗಳ ಮೂಲಕ ನಡೆಸಲಾಗುವುದು. ಅದರಲ್ಲಿ ಸ್ವಯಂ ಎಣಿಕೆಗಾಗಿ ಆನ್‌ಲೈನ್ ನಿಬಂಧನೆಯೊಂದಿಗೆ ಮೊಬೈಲ್ ಅಪ್ಲಿಕೇಶನ್‌ಗಳ ಮೂಲಕ ಡೇಟಾ ಸಂಗ್ರಹಿಸಲಾಗುವುದೆಂದರು.

# ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಗಡಿ ಭಾಗದ ಗ್ರಾಮಗಳಿಂದ ಪಕ್ಕದ ತಾಲ್ಲೂಕು ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳನ್ನು ಅಭಿವೃದ್ಧಿಗೊಳಿಸಲಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿನ ಹಿರೀಸಾವೆ ಗ್ರಾಮದಲ್ಲಿ 40 ಲಕ್ಷ ರೂ. ವೆಚ್ಚದ ಕಾಂಕ್ರೀಟ್ ರಸ್ತೆ ಅಭಿವೃದ್ಧಿ ಕಾಮ ಗಾರಿಗೆ ಸೋಮವಾರ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಇದರಿಂದ ತಾಲ್ಲೂಕಿನ ಗಡಿಭಾಗದ ಗ್ರಾಮಗಳ ಜನತೆಗೆ ಹೆಚ್ಚಿನ ಅನುಕೂಲವಾಗಲಿದೆ. ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ವೇಳೆ 440 ಕಿಮೀ ರಸ್ತೆ ಅಭಿವೃದ್ಧಿಗೆ ಅನುದಾನ ಕಲ್ಪಿಸಿದ್ದರು. ಹಲವು ಹಂತಗಳಲ್ಲಿ ಅಭಿವೃದ್ಧಿಗೊಳಿಸಲಾಗಿದ್ದು ತಾಲ್ಲೂಕು ವ್ಯಾಪ್ತಿಯಲ್ಲಿ ರಸ್ತೆಗಳು ಸುಧಾರಣೆ ಕಂಡಿವೆ ಎಂದು ತಿಳಿಸಿದರು.

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಪರಿಣಾಮ ನಿರೀಕ್ಷೆಯಂತೆ ಅನುದಾನ ಸಿಗದಿ ದ್ದರೂ ಅನುದಾನಗಳ ಲಭ್ಯತೆಯ ಮೇರೆಗೆ ವಿವಿಧ ಯೋಜನೆಗಳನ್ನು ಸದ್ಬಳಕೆ ಮಾಡಿಕೊಂಡು ತಾಲ್ಲೂಕಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದೆ ಎಂದರು.



ವಾಣಿಜ್ಯ ಹಾಗೂ ಜನವಸತಿಯೊಂದಿಗೆ ದಿನದಿಂದ ದಿನಕ್ಕೆ ತಾಲ್ಲೂಕು ಮಟ್ಟಕ್ಕೆ ಬೆಳೆಯುತ್ತಿ ರುವ ಹಿರೀಸಾವೆ ಗ್ರಾಮದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಏತ ನೀರಾವರಿ ಯೋಜನೆಯಡಿ ಕೆರೆಗೆ ನೀರು ತುಂಬಿಸುವುದರ ಜೊತೆಗೆ ಬಸ್ ನಿಲ್ದಾಣ, ದೊಡ್ಡ ಸೇತುವೆ, ರಸ್ತೆ, ಚರಂಡಿ ನಿರ್ಮಾಣ ಹಾಗೂ ವಿವಿಧ ಕಾಮಗಾರಿಗಳನ್ನು ಕೈಗೊಂಡು ಅಭಿವೃದ್ಧಿಗೊಳಿಸಲಾಗಿದೆ. ಅನುದಾನಗಳ ಲಭ್ಯತೆ ಮೇರೆಗೆ ಮತ್ತಷ್ಟು ಅಭಿವೃದ್ಧಿಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಹೆಚ್.ಎಸ್.ರವಿಕುಮಾರ್, ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಹೆಚ್.ಜಿ.ರಾಮಕೃಷ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ವಳಗೇರಹಳ್ಳಿ ಮಂಜೇಗೌಡ, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಜೆ.ಮಹೇಶ್, ನಿರ್ದೇಶಕ ಹಿಂದ್ಲಟ್ಟಿ ಬೋರೇಗೌಡ, ಗ್ರಾಮ ಪಂಚಾಯಿತಿ ಅಧ್ಯಕ್ಷ ಪರಮೇಶ್, ಮಾಜಿ ಅಧ್ಯಕ್ಷ ಹೆಚ್.ಈ.ಬೋರಣ್ಣ, ಸದಸ್ಯ ಮಂಜು, ಪ್ರಮುಖರಾದ ಡಾಬಾ ಬಾಬು, ಮಂಜು ಇದ್ದರು.

# ರೋ-ಕೊ ಎದುರಿಸುವುದು ನಮಗೆ ಹೊಸತಲ್ಲ

• ಪ್ರಜೋದಯ ವರದಿ



**ರಾಯ್‌ಪುರ:** ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಇರುವ ಭಾರತ ತಂಡವನ್ನು ಎದುರಿಸುವುದು ನಮಗೆ ಹೊಸದೇನು ಅಲ್ಲ, ಆದರೆ, ಅವರು ತಂಡದಲ್ಲಿ ಇರುವುದರಿಂದ ಟೀಂ ಇಂಡಿಯಾದ ಬಲ ಹೆಚ್ಚಾಗ್ಲಲಿದೆ ಎಂದು ದಕ್ಷಿಣ ಆಫ್ರಿಕಾ ತಂಡದ ನಾಯಕ ತೆಂಬಾ ಬವುಮಾ ಅವರು ಹೇಳಿದ್ದಾರೆ.

ಇತ್ತೀಚೆಗೆ ಮುಕ್ತಾಯಗೊಂಡ ಟೆಸ್ಟ್ ಸರಣಿಯನ್ನು 0-2ರ ಅಂತರದಲ್ಲಿ ಭಾರತದ ವಿರುದ್ಧ ಗೆದ್ದ ದಕ್ಷಿಣ ಆಫ್ರಿಕಾ, ಏಕದಿನದಲ್ಲಿ ಆಡಿದ ಮೊದಲ ಪಂದ್ಯದಲ್ಲಿ ಸೋಲು ಅನುಭವಿಸಿದೆ. ಮೊದಲ ಏಕದಿನ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಶತಕ ಹಾಗೂ ರೋಹಿತ್ ಶರ್ಮಾ ಅಮೋಘ ಅರ್ಧಶತಕ ಸಿಡಿಸಿ ಮಿಂಚಿದರು.

ರೋಹಿತ್ ಶರ್ಮಾ ಹಾಗೂ ವಿರಾಟ್ ಕೊಹ್ಲಿ ಕುರಿತು ಮಾತನಾಡಿದ ಅವರು, ಆ ಇಬ್ಬರು ಆಟಗಾರರು ಭಾರತ ತಂಡಕ್ಕೆ ಮರಳಿರುವುದರಿಂದ ಅವರ ತಂಡಕ್ಕೆ ಬಲ ಬರಲಿದೆ. ಸರಣಿಯ ಆರಂಭದಲ್ಲೇ ನಾವು ಹೇಳಿದಂತೆ ಆ ಇಬ್ಬರೂ ಸಾಕಷ್ಟು ಅನುಭವ, ಕೌಶಲ ಹೊಂದಿದ್ದಾರೆ. ಹಾಗಾಗಿ ಈ ಇಬ್ಬರ ಉಪಸ್ಥಿತಿ ಆ ತಂಡಕ್ಕೆ ಪ್ರಯೋಜನಕಾರಿ ಎಂದರು.

ನಾವು ಭಾರತ ತಂಡವನ್ನು ಹಲವು ಬಾರಿ ಎದುರಿಸಿದ್ದೇವೆ. ಅದರಲ್ಲಿ ಸೋಲು-ಗೆಲುವು ಎರಡನ್ನೂ ನಾವು ನೋಡಿದ್ದೇವೆ. ಈ ಅಂಕಿ-ಅಂಶಗಳು ಸರಣಿಯನ್ನು ಮತ್ತಷ್ಟು ರೋಮಾಂಚನ ಗೊಳಿಸಿದೆ ಎಂದರು.

### ಹಾರ್ದಿಕ್ ಪಾಂಡ್ಯ ಅಬ್ಬರ: ಬರೋಡಾ ತಂಡಕ್ಕೆ ಗೆಲುವು

ಹೈದರಾಬಾದ್: ಎರಡು ತಿಂಗಳ ಬಳಿಕ ಸ್ಪರ್ಧಾತ್ಮಕ ಕ್ರಿಕೆಟ್‌ಗೆ ಮರಳಿದ ಭಾರತ ತಂಡದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಸೈಯ್ಯದ್ ಮುಷ್ತಾಕ್ ಅಲಿ ಟೂರ್ನಿಯ ಪಂಜಾಬ್ ವಿರುದ್ಧದ ಪಂದ್ಯದಲ್ಲಿ ಅಜೇಯ 77 ರನ್‌ಗಳಿಸಿ ಬರೋಡಾ ತಂಡದ ಗೆಲುವಿಗೆ ಕಾರಣರಾಗಿದ್ದಾರೆ.

ಪಂಜಾಬ್ ತಂಡದ ಪರ ಸ್ಫೋಟಕ ಬ್ಯಾಟಿಂಗ್ ನಡೆಸಿದ ಭಾರತದ ಆರಂಭಿಕ ಆಟಗಾರ ಅಭಿಷೇಕ್ ಶರ್ಮಾ ಕೇವಲ 19 ಎಸೆತಗಳಲ್ಲಿ 50 ರನ್ ಸಿಡಿಸಿದರು. ಆ ಮೂಲಕ ಬರೋಡ ತಂಡ ನಿಗದಿತ 20 ಓವರ್‌ಗಳಲ್ಲಿ 222 ರನ್‌ಗಳ ಟಾರ್ಗೆಟ್ ನೀಡಿದರು.

ಬರೋಡಾ ಪರ ಹಾರ್ದಿಕ್ ಪಾಂಡ್ಯ 42 ಎಸೆತಗಳ 7 ಬೌಂಡರಿ ಹಾಗೂ 4 ಸಿಕ್ಸರ್ ನೆರವಿನಿಂದ 77 ರನ್ ಗಳಿಸಿದರು. ಆ ಮೂಲಕ ಬರೋಡ ತಂಡ 19.1 ಓವರ್‌ಗಳಲ್ಲಿ 224 ರನ್ ಗಳಿಸಿ ಗೆಲುವು ಸಾಧಿಸಿತು.

ಸೆ.26ರಂದು ಶ್ರೀಲಂಕಾ ವಿರುದ್ಧ ದುಬೈನಲ್ಲಿ ನಡೆದ ಏಷ್ಯಾ ಕಪ್ ಪಂದ್ಯದಲ್ಲಿ ಹಾರ್ದಿಕ್ ಪಾಂಡ್ಯ ಕೊನೆಯದಾಗಿ ಕಾಣಿಸಿಕೊಂಡಿದ್ದರು. ಅದಾದ ಬಳಿಕ ಅವರು ಎಡ ಕ್ವಾಡ್ರೈಸ್ಪ್ ಗಾಯದಿಂದಾಗಿ ತಂಡದಿಂದ ಹೊರಗುಳಿದಿದ್ದರು.

ಬ್ಯಾಟಿಂಗ್ ಮಾತ್ರವಲ್ಲ, ಬೌಲಿಂಗ್‌ನಲ್ಲೂ 4 ಓವರ್‌ನಲ್ಲಿ ಹಾರ್ದಿಕ್ 52 ರನ್ ಬಿಟ್ಟುಕೊಟ್ಟು 1 ವಿಕೆಟ್ ಪಡೆದರು. ಅವರ ಈ ಪ್ರದರ್ಶನ ಮುಂಬರುವ ದಕ್ಷಿಣ ಆಫ್ರಿಕಾ ವಿರುದ್ಧದ ಟಿ-20 ಸರಣಿಗೆ ಆಯ್ಕೆ ಮಾಡುವ ಅವಕಾಶವನ್ನು ಹೆಚ್ಚಿಸಿದೆ.

## ಹನುಮ ಮಾಲಾಧಾರಿಗಳಿಂದ ವಿಶೇಷ ಪೂಜೆ



• ಪ್ರಜೋದಯ ವರದಿ

**ಬಾಣಾವರ:** ಪ್ರಾಚೀನ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಹನುಮಜಯಂತಿಯನ್ನುವಿಜೃಂಭಣೆಯಿಂದ ನೆರವೇರಸಲಾಯಿತು.

ಹನುಮ ಜಯಂತಿಯ ಪ್ರಯುಕ್ತ ದೇವಾಲಯದಲ್ಲಿ ಹನುಮ ಮಾಲಾಧಾರಿಗಳು ಮಾಲೆ ಧರಿಸಿ ಭಜನೆ ಹಾಗು ವಿಶೇಷ ಪೂಜೆ ಸಲ್ಲಿಸಿದರು. ದೇವಾಲಯದಲ್ಲಿ ರಾಮ ತಾರಕ ಆಂಜ ನೇಯ ಹೋಮವನ್ನು ಶೇಷಾದ್ರಿ, ಭಟ್ ಮತ್ತು ಸಂಗಡಿಗರ ನೇತೃತ್ವದಲ್ಲಿ ನಡೆಸಲಾಯಿತು.

ಬಳಿಕ ಆಂಜನೇಯಸ್ವಾಮಿ ಉತ್ಸವ ಮೂರ್ತಿಯನ್ನು ವಿಶೇಷ ರಥದಲ್ಲಿ ಕೂರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಸಂಘದ ಅಧ್ಯಕ್ಷ ಬಿ.ಎನ್.ರವಿ, ಉಪಾಧ್ಯಕ್ಷ ನಾಗೇಶ್, ಖಜಾಂಚಿ ಶ್ರೀನಿವಾಸ್, ಕಾರ್ಯದರ್ಶಿ ಬೀರಪ್ಪ, ಅರ್ಚಕರಾದ ಶ್ರೀನಿವಾಸ್, ಮಾರುತಿ, ಬಿ.ಟಿ.ರಾಜು, ಬಸವರಾಜು, ಬಾಲಾಜಿ ಮತ್ತಿತರರು ಹಾಜರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019